# ಅನೈತಿಕ ವ್ಯವಹಾರ (ಪ್ರತಿಬಂಧ) ಅಧಿನಿಯಮ, 1956

(5.5.2007 ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 37ನೇ ಸಂಪುಟದ 1ನೇ ಸಂಚಿಕೆಯಲ್ಲಿ 134 ರಿಂದ 155ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ)

## ವಿಷಯಾನುಕ್ರಮಣಿಕೆ

**ಪ್ರಕರಣಗಳು**


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ

2. ಪರಿಭಾಷೆಗಳು

2ಎ. ಜಮ್ಮು ಮತ್ತು ಕಾಶ್ಮೀರಕ್ಕೆ ವ್ಯಾಪ್ತವಾಗದ ಅಧಿನಿಯಮಿತಿಗಳಿಗೆ ಸಂಬಂಧಿಸಿದಂತೆ ಅರ್ಥಾನ್ವಯ ನಿಯಮ

3. ವೇಶ್ಯಾಗೃಹವನ್ನು ನಡೆಸುವುದಕ್ಕಾಗಿ ಅಥವಾ ಆವರಣವನ್ನು ವೇಶ್ಯಾಗೃಹವಾಗಿ ಉಪಯೋಗಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ದಂಡನೆ

4. ವೇಶ್ಯಾವೃತ್ತಿಯ ಗಳಿಕೆಯಿಂದ ಜೀವನ ನಡೆಸುವುದಕ್ಕಾಗಿ ದಂಡನೆ

5. ವೇಶ್ಯಾವೃತ್ತಿಗಾಗಿ ವ್ಯಕ್ತಿಯನ್ನು ಒದಗಿಸುವುದು, ಪ್ರೇರೇಪಿಸುವುದು ಅಥವಾ ಕರೆದುಕೊಂಡು ಹೋಗುವುದು

6. ವೇಶ್ಯಾವೃತ್ತಿಯು ನಡೆಯುತ್ತಿರುವ ಆವರಣದಲ್ಲಿ ವ್ಯಕ್ತಿಯನ್ನು ತಡೆಹಿಡಿದಿಡುವುದು

7. ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ವೇಶ್ಯಾವೃತ್ತಿ ನಡೆಸುವುದು

8. ವೇಶ್ಯಾವೃತ್ತಿಯ ಉದ್ದೇಶಕ್ಕಾಗಿ ದುರ್ಮಾರ್ಗಕ್ಕೆ ಪ್ರೇರೇಪಿಸುವುದು ಅಥವಾ ಆಹ್ವಾನಿಸುವುದು

9. ಅಭಿರಕ್ಷೆಯಲ್ಲಿರುವ ವ್ಯಕ್ತಿಯನ್ನು ದುರ್ಮಾರ್ಗಕ್ಕೆ ಎಳೆಯುವುದು

10. [ನಿರಸನಗೊಳಿಸಲಾಗಿದೆ]

10ಎ. ಸುಧಾರಕ ಸಂಸ್ಥೆಯಲ್ಲಿ ತಡೆಹಿಡಿದಿಡುವುದು

11. ಈ ಹಿಂದೆ ಅಪರಾಧಿಗಳೆಂದು ನಿರ್ಣೀತರಾದವರ ವಿಳಾಸಗಳ ಅಧಿಸೂಚನೆ

12. [ನಿರಸನಗೊಳಿಸಲಾಗಿದೆ]

13. ವಿಶೇಷ ಪೊಲೀಸ್ ಅಧಿಕಾರಿ ಮತ್ತು ಸಲಹಾ ನಿಕಾಯ

14. ಅಪರಾಧಗಳು ಸಂಜ್ಞೇಯವಾಗಿರುವುದು

15. ವಾರಂಟಿಲ್ಲದೆ ಶೋಧನೆ

16. ವ್ಯಕ್ತಿಯನ್ನು ರಕ್ಷಿಸುವುದು

17. 15ನೇ ಪ್ರಕರಣದ ಮೇರೆಗೆ ಸ್ಥಳಾಂತರಿಸಲಾದ ಅಥವಾ 16ನೇ ಪ್ರಕರಣದ ಮೇರೆಗೆ ರಕ್ಷಿಸಲಾದ ವ್ಯಕ್ತಿಗಳ ಮಧ್ಯಕಾಲೀನ ಅಭಿರಕ್ಷೆ

17ಎ. 16ನೇ ಪ್ರಕರಣದ ಮೇರೆಗೆ ರಕ್ಷಿಸಲಾದ ವ್ಯಕ್ತಿಗಳನ್ನು ಅವನ ತಂದೆ - ತಾಯಿ ಅಥವಾ ಪೋಷಕರಿಗೆ ಒಪ್ಪಿಸುವುದಕ್ಕೆ ಮೊದಲು ಪಾಲಿಸಬೇಕಾದ ಷರತ್ತುಗಳು

18. ವೇಶ್ಯಾ ಗೃಹಗಳನ್ನು ಮುಚ್ಚುವುದು ಮತ್ತು ಆ ಆವರಣದಿಂದ ಅಪರಾಧಿಗಳನ್ನು ಹೊರದೂಡುವುದು

19. ಸಂರಕ್ಷಾ ಗೃಹದಲ್ಲಿ ಇಟ್ಟುಕೊಳ್ಳುವುದಕ್ಕಾಗಿ ಅಥವಾ ನ್ಯಾಯಾಲಯವು ಆರೈಕೆ ಮತ್ತು ರಕ್ಷಣೆಯನ್ನು ಒದಗಿಸುವುದಕ್ಕಾಗಿ ಸಲ್ಲಿಸುವ ಅರ್ಜಿ

20. ಯಾವುದೇ ಸ್ಥಳದಿಂದ ವೇಶ್ಯೆಯನ್ನು ಸ್ಥಳಾಂತರಿಸುವುದು

21. ಸಂರಕ್ಷಾ ಗೃಹಗಳು

21ಎ. ದಾಖಲೆಗಳನ್ನು ಹಾಜರುಪಡಿಸುವುದು

22. ಅಧಿವಿಚಾರಣೆಗಳು

22ಎ. ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ಅಧಿಕಾರ

22ಎಎ. ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರದ ಅಧಿಕಾರ

22ಬಿ. ಮೊಕದ್ದಮೆಗಳ ಶೀಘ್ರ ಅಧಿವಿಚಾರಣೆ ನಡೆಸಲು ನ್ಯಾಯಾಲಯದ ಅಧಿಕಾರ

23. ನಿಯಮ ರಚನಾಧಿಕಾರ

24. ಈ ಅಧಿನಿಯಮವು ಇತರ ಕೆಲವು ಅಧಿನಿಯಮಗಳನ್ನು ಅಲ್ಪೀಕರಿಸದಿರುವುದು

25. ನಿರಸನ ಮತ್ತು ಉಳಿಸುವಿಕೆಗಳು

**ಅನುಸೂಚಿ**

# ಅನೈತಿಕ ವ್ಯವಹಾರ (ಪ್ರತಿಬಂಧ) ಅಧಿನಿಯಮ, 1956

(1956ರ ಅಧಿನಿಯಮ ಸಂಖ್ಯೆ 104)

[30ನೇ ಡಿಸೆಂಬರ್, 1956]

1950ರ ಮೇ 9ನೇ ದಿನಾಂಕದಂದು ನ್ಯೂಯಾರ್ಕಿನಲ್ಲಿ ಸಹಿಮಾಡಲಾದ ಅಂತರರಾಷ್ಟ್ರೀಯ ಒಡಂಬಡಿಕೆಗೆ ಅನುಸಾರವಾಗಿ ಅನೈತಿಕ ವ್ಯವಹಾರವನ್ನು ಪ್ರತಿಬಂಧಿಸಲು ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಏಳನೆಯ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ**.- (1) ಈ ಅಧಿನಿಯಮವನ್ನು ಅನೈತಿಕ ವ್ಯವಹಾರ (ಪ್ರತಿಬಂಧ) ಅಧಿನಿಯಮ, 1956 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಈ ಪ್ರಕರಣವು ಕೂಡಲೆ ಜಾರಿಗೆ ಬರತಕ್ಕದ್ದು; ಮತ್ತು ಈ ಅಧಿನಿಯಮದ ಉಳಿದ ಉಪಬಂಧಗಳು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು**.- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸುವ ಹೊರತು,-

(ಎ) "ವೇಶ್ಯಾಗೃಹ" ಎಂಬುದು ಬೇರೊಬ್ಬ ವ್ಯಕ್ತಿಯ ಲಾಭಕ್ಕಾಗಿ ಅಥವಾ ಇಬ್ಬರು ಅಥವಾ ಹೆಚ್ಚು ವೇಶ್ಯೆಯರ ಪರಸ್ಪರ ಲಾಭಕ್ಕಾಗಿ ಲೈಂಗಿಕ ಶೋಷಣೆ ಅಥವಾ ದುರುಪಯೋಗದ ಉದ್ದೇಶಗಳಿಗಾಗಿ ಉಪಯೋಗಿಸಲಾಗುವ ಯಾವುದೇ ಮನೆ, ಕೊಠಡಿ, ವಾಹನ ಅಥವಾ ಸ್ಥಳ ಅಥವಾ ಯಾವುದೇ ಮನೆ, ಕೊಠಡಿ, ವಾಹನ ಅಥವಾ ಸ್ಥಳದ ಯಾವುದೇ ಭಾಗವನ್ನು ಒಳಗೊಳ್ಳುತ್ತದೆ;

(ಎಎ) "ಮಗು" ಎಂದರೆ ಹದಿನಾರು ವರ್ಷಗಳ ವಯಸ್ಸು ತುಂಬಿಲ್ಲದ ವ್ಯಕ್ತಿ;

(ಬಿ) "ಸುಧಾರಕ ಸಂಸ್ಥೆ" ಎಂದರೆ (21ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಸಂಸ್ಥೆಯಾಗಿರುವ ಅಥವಾ ಹಾಗೆ ಸ್ಥಾಪಿಸುವುದಕ್ಕೆ ಲೈಸೆನ್ಸು ನೀಡಲಾದ) ಯಾವುದೇ ಹೆಸರಿನಿಂದ ಕರೆಯಲಾಗುವ ಹಾಗೂ ಸುಧಾರಣೆಯು ಅಗತ್ಯವಾಗಿರುವ ವ್ಯಕ್ತಿಗಳನ್ನು ಈ ಅಧಿನಿಯಮದ ಮೇರೆಗೆ ತಡೆಹಿಡಿದಿಡಬಹುದಾದ ಸಂಸ್ಥೆ ಮತ್ತು ಇದು ಈ ಅಧಿನಿಯಮಕ್ಕನುಸಾರವಾಗಿ ವಿಚಾರಣಾಧೀನ ವ್ಯಕ್ತಿಗಳನ್ನು ಇಡಬಹುದಾದಂಥ ಆಶ್ರಯ ಸ್ಥಾನವನ್ನು ಒಳಗೊಳ್ಳುತ್ತದೆ;

(ಸಿ) "ಮ್ಯಾಜಿಸ್ಟ್ರೇಟ್" ಎಂದರೆ ಯಾವ ಪ್ರಕರಣದಲ್ಲಿ ಈ ಪದವು ಬಂದಿರುವುದೋ ಮತ್ತು ಅನುಸೂಚಿಯ ಮೊದಲ ಅಂಕಣದಲ್ಲಿ ಅದನ್ನು ನಿರ್ದಿಷ್ಟಪಡಿಸಲಾಗಿರುವುದೋ ಆ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಲು ಸಕ್ಷಮನಾಗಿರುವ ಮತ್ತು ಅನುಸೂಚಿಯ ಎರಡನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮ್ಯಾಜಿಸ್ಟ್ರೇಟ್;

(ಸಿಎ) "ಪ್ರಾಪ್ತ ವಯಸ್ಕ" ಎಂದರೆ ಹದಿನೆಂಟು ವರ್ಷ ವಯಸ್ಸು ತುಂಬಿರುವ ವ್ಯಕ್ತಿ;

(ಸಿಬಿ) "ಅಪ್ರಾಪ್ತ ವಯಸ್ಕ" ಎಂದರೆ ಹದಿನಾರು ವರ್ಷ ವಯಸ್ಸು ತುಂಬಿರುವ ಆದರೆ ಹದಿನೆಂಟು ವರ್ಷ ವಯಸ್ಸು ತುಂಬಿರದ ವ್ಯಕ್ತಿ;

(ಡಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಇ) [XXX]

(ಎಫ್) "ವೇಶ್ಯಾವೃತ್ತಿ" ಎಂದರೆ ವಾಣಿಜ್ಯದ ಉದ್ದೇಶಗಳಿಗಾಗಿ ವ್ಯಕ್ತಿಗಳ ಲೈಂಗಿಕ ಶೋಷಣೆ ಅಥವಾ ದುರುಪಯೋಗ ಎಂದು ಅರ್ಥ ಮತ್ತು 'ವೇಶ್ಯೆ' ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

(ಜಿ) "ಸಂರಕ್ಷಾ ಗೃಹ" ಎಂದರೆ ಈ ಅಧಿನಿಯಮದ ಮೇರೆಗೆ ಆರೈಕೆ ಮತ್ತು ಸಂರಕ್ಷಣೆ ಅಗತ್ಯವಾಗಿರುವ ವ್ಯಕ್ತಿಗಳನ್ನು ಇಡಬಹುದಾದ ಮತ್ತು ತಾಂತ್ರಿಕ ಅರ್ಹತೆಗಳನ್ನು ಹೊಂದಿರುವ ಸೂಕ್ತ ವ್ಯಕ್ತಿಗಳು, ಸಾಧನ ಸಾಮಗ್ರಿಗಳು ಮತ್ತು ಇತರ ಸೌಲಭ್ಯಗಳ ವ್ಯವಸ್ಥೆಯನ್ನು ಮಾಡಿರುವ, 21ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಅಥವಾ ಒಂದು ಸಂಸ್ಥೆಯಾಗಿ ಲೈಸೆನ್ಸನ್ನು ಪಡೆದಿರುವಂಥ ಸಂಸ್ಥೆಯಾಗಿದ್ದು ಯಾವುದೇ ಹೆಸರಿನಿಂದ ಕರೆಯಲ್ಪಡುವ ಸಂಸ್ಥೆ, ಆದರೆ ಇದು,-

(i) ವಿಚಾರಣಾಧೀನ ವ್ಯಕ್ತಿಗಳನ್ನು ಈ ಅಧಿನಿಯಮಕ್ಕೆ ಅನುಸಾರವಾಗಿ ಇಡಬಹುದಾದ ಆಶ್ರಯ ಸ್ಥಾನವನ್ನು, ಅಥವಾ

(ii) ಸುಧಾರಕ ಸಂಸ್ಥೆಯನ್ನು

- ಒಳಗೊಳ್ಳುವುದಿಲ್ಲ.

(ಎಚ್) "ಸಾರ್ವಜನಿಕ ಸ್ಥಳ" ಎಂದರೆ ಸಾರ್ವಜನಿಕರ ಉಪಯೋಗಕ್ಕಾಗಿ ಉದ್ದೇಶಿಸಲಾಗಿರುವ ಅಥವಾ ಅವರಿಗೆ ಪ್ರವೇಶಾವಕಾಶವಿರುವ ಯಾವುದೇ ಸ್ಥಳ ಮತ್ತು ಇದು ಯಾವುದೇ ಸಾರ್ವಜನಿಕ ವಾಹನವನ್ನು ಒಳಗೊಳ್ಳುತ್ತದೆ;

(ಐ) "ವಿಶೇಷ ಪೊಲೀಸ್ ಅಧಿಕಾರಿ" ಎಂದರೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಒಂದು ನಿರ್ದಿಷ್ಟ ಪ್ರದೇಶದೊಳಗೆ ಪೊಲೀಸನ ಕರ್ತವ್ಯಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರವು ನೇಮಿಸಿದ ಅಥವಾ ಅದರ ಪರವಾಗಿ ನೇಮಕ ಮಾಡಲಾದ ಪೊಲೀಸ್ ಅಧಿಕಾರಿ;

(ಜೆ) "ಟ್ರಾಫಿಕಿಂಗ್ ಪೊಲೀಸ್ ಅಧಿಕಾರಿ" ಎಂದರೆ 13ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ನೇಮಕ ಮಾಡಿದ ಪೊಲೀಸ್ ಅಧಿಕಾರಿ.

**2ಎ. ಜಮ್ಮು ಮತ್ತು ಕಾಶ್ಮೀರಕ್ಕೆ ವ್ಯಾಪ್ತವಾಗದ ಅಧಿನಿಯಮಿತಿಗಳಿಗೆ ಸಂಬಂಧಿಸಿದಂತೆ ಅರ್ಥಾನ್ವಯ ನಿಯಮ.-** ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿ ಇಲ್ಲದಿರುವ ಕಾನೂನಿಗೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿ ಮಾಡಲಾದ ಯಾವುದೇ ಉಲ್ಲೇಖವನ್ನು ಆ ರಾಜ್ಯಕ್ಕೆ ಸಂಬಂಧಿಸಿದಂತೆ ಆ ರಾಜ್ಯದಲ್ಲಿ ಸಂವಾದಿ ಕಾನೂನು ಯಾವುದಾದರೂ ಜಾರಿಯಲ್ಲಿದ್ದರೆ ಅದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**3. ವೇಶ್ಯಾಗೃಹವನ್ನು ನಡೆಸುವುದಕ್ಕಾಗಿ ಅಥವಾ ಆವರಣವನ್ನು ವೇಶ್ಯಾಗೃಹವಾಗಿ ಉಪಯೋಗಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ದಂಡನೆ.-** (1) ವೇಶ್ಯಾಗೃಹವನ್ನು ನಡೆಸುವ ಅಥವಾ ಅದರ ವ್ಯವಸ್ಥೆಯನ್ನು ನೋಡಿಕೊಳ್ಳುವ ಅಥವಾ ಅದನ್ನು ನಡೆಸುವ ಅಥವಾ ಅದರ ವ್ಯವಸ್ಥೆಯನ್ನು ನೋಡಿಕೊಳ್ಳಲು ತೊಡಗುವ ಅಥವಾ ಅದಕ್ಕೆ ಸಹಾಯ ಮಾಡುವ ಯಾರೇ ವ್ಯಕ್ತಿಯು, ಮೊದಲನೇ ಅಪರಾಧ ನಿರ್ಣಯವಾದಾಗ ಒಂದು ವರ್ಷಕ್ಕೆ ಕಡಿಮೆಯಿಲ್ಲದ, ಆದರೆ ಮೂರು ವರ್ಷಗಳಿಗೆ ಮೀರದ ಅವಧಿಯ ಕಠಿಣ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ ಮತ್ತು ಎರಡನೇ ಅಥವಾ ತರುವಾಯದ ಅಪರಾಧ ನಿರ್ಣಯವಾದ ಪಕ್ಷದಲ್ಲಿ ಎರಡು ವರ್ಷಗಳಿಗೆ ಕಡಿಮೆಯಿಲ್ಲದ, ಆದರೆ ಐದು ವರ್ಷಗಳಿಗೆ ಮೀರದ ಅವಧಿಯ ಕಠಿಣ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ ದಂಡನೀಯನಾಗತಕ್ಕದ್ದು.

(2) ಯಾರೇ ವ್ಯಕ್ತಿಯು,-

(ಎ) ಯಾವುದೇ ಆವರಣದ ಬಾಡಿಗೆದಾರ, ಗುತ್ತಿಗೆಗೆ ಪಡೆದವನು, ಅಧಿಭೋಗದಾರನಾಗಿದ್ದು ಅಥವಾ ಅದರ ಉಸ್ತುವಾರಿ ನೋಡಿಕೊಳ್ಳುವವನಾಗಿದ್ದು, ಅಂಥ ಆವರಣವನ್ನು ಅಥವಾ ಅದರ ಯಾವುದೇ ಭಾಗವನ್ನು ವೇಶ್ಯಾಗೃಹವಾಗಿ ಉಪಯೋಗಿಸಿದರೆ ಅಥವಾ ಗೊತ್ತಿದ್ದೂ ಬೇರೆ ಯಾರೇ ವ್ಯಕ್ತಿಗೆ ಹಾಗೆ ಉಪಯೋಗಿಸಲು ಅವಕಾಶ ಕೊಟ್ಟರೆ, ಅಥವಾ

(ಬಿ) ಯಾವುದೇ ಆವರಣದ ಒಡೆಯನಾಗಿದ್ದು, ಗುತ್ತಿಗೆಗೆ ಕೊಟ್ಟವನಾಗಿದ್ದು ಅಥವಾ ಮಾಲೀಕನಾಗಿದ್ದು ಅಥವಾ ಅಂಥ ಒಡೆಯನ, ಗುತ್ತಿಗೆಗೆ ಕೊಟ್ಟವನ ಅಥವಾ ಮಾಲೀಕನ ಏಜೆಂಟನಾಗಿದ್ದು ಅದನ್ನು ಅಥವಾ ಅದರ ಯಾವುದೇ ಭಾಗವನ್ನು ವೇಶ್ಯಾಗೃಹವಾಗಿ ಉಪಯೋಗಿಸುವ ಉದ್ದೇಶವಿದೆ ಎಂದು ಗೊತ್ತಿದ್ದೂ ಬಾಡಿಗೆಗೆ ಕೊಟ್ಟರೆ, ಅಥವಾ ಅಂಥ

ಆವರಣವನ್ನು ಅಥವಾ ಅದರ ಯಾವುದೇ ಭಾಗವನ್ನು ವೇಶ್ಯಾಗೃಹವಾಗಿ ಉಪಯೋಗಿಸುವಲ್ಲಿ ಬುದ್ಧಿಪೂರ್ವಕವಾಗಿ ಭಾಗಿಯಾಗಿದ್ದರೆ

– ಮೊದಲನೇ ಅಪರಾಧ ನಿರ್ಣಯವಾದಾಗ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೇ ಅಥವಾ ತರುವಾಯ ಅಪರಾಧ ನಿರ್ಣಯವಾದ ಪಕ್ಷದಲ್ಲಿ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

(2ಎ) (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ತದ್ವಿರುದ್ಧವಾದುದು ರುಜುವಾತಾಗುವವರೆಗೆ ಆ ಉಪಪ್ರಕರಣದ (ಎ) ಖಂಡ ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಯಾರೇ ವ್ಯಕ್ತಿಯು ಗೊತ್ತಿದ್ದೂ ಆ ಆವರಣವನ್ನು ಅಥವಾ ಅದರ ಯಾವುದೇ ಭಾಗವನ್ನು ವೇಶ್ಯಾಗೃಹವಾಗಿ ಉಪಯೋಗಿಸುವುದಕ್ಕೆ ಅನುಮತಿಸುತ್ತಿರುವನೆಂದು ಅಥವಾ ಸಂದರ್ಭಾನುಸಾರ,–

(ಎ) ಈ ಅಧಿನಿಯಮದ ಮೇರೆಗೆ ಮಾಡಿದ ಶೋಧನೆಯ ಪರಿಣಾಮವಾಗಿ ಆ ಆವರಣವನ್ನು ಅಥವಾ ಅದರ ಯಾವುದೇ ಭಾಗವನ್ನು ವೇಶ್ಯಾವೃತ್ತಿಗಾಗಿ ಬಳಸುತ್ತಿರುವುದು ಕಂಡುಬಂದಿರುವ ಬಗ್ಗೆ, ಅಂಥ ವ್ಯಕ್ತಿಯು ವಾಸಿಸುತ್ತಿರುವ ಪ್ರದೇಶದಲ್ಲಿ ಪ್ರಸಾರದಲ್ಲಿರುವ ವೃತ್ತ ಪತ್ರಿಕೆಯಲ್ಲಿ ಒಂದು ವರದಿಯು ಪ್ರಕಟವಾಗಿದ್ದರೆ; ಅಥವಾ

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಲಾದ ಶೋಧನೆಯ ಅವಧಿಯಲ್ಲಿ ಕಂಡುಬಂದ ಎಲ್ಲ ವಸ್ತುಗಳ ಪಟ್ಟಿಯ ಪ್ರತಿಯನ್ನು ಅಂಥ ವ್ಯಕ್ತಿಗೆ ಕೊಟ್ಟಿದ್ದರೆ

– ಗೊತ್ತಿದ್ದೂ ಆ ಆವರಣವನ್ನು ಅಥವಾ ಅದರ ಯಾವುದೇ ಭಾಗವನ್ನು ವೇಶ್ಯಾಗೃಹವಾಗಿ ಉಪಯೋಗಿಸುವುದಕ್ಕೆ ಅನುಮತಿಸುತ್ತಿರುವನೆಂದು ಅಥವಾ ಸಂದರ್ಭಾನುಸಾರ ಆ ಆವರಣವನ್ನು ಅಥವಾ ಅದರ ಯಾವುದೇ ಭಾಗವನ್ನು ವೇಶ್ಯಾಗೃಹವಾಗಿ ಬಳಸುತ್ತಿರುವುದು ಅವನಿಗೆ ತಿಳಿದಿತ್ತೆಂದು ಪೂರ್ವಭಾವನೆ ಮಾಡತಕ್ಕದ್ದು.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಯಾವುದೇ ಆವರಣ ಅಥವಾ ಅದರ ಯಾವುದೇ ಭಾಗದ ಸಂಬಂಧದಲ್ಲಿ (2)ನೇ ಉಪಪ್ರಕರಣದ ಮೇರೆಗಿನ ಯಾವುದೇ ಅಪರಾಧದ ಬಗ್ಗೆ ಆ ಉಪಪ್ರಕರಣದ (ಎ) ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಯಾರೇ ವ್ಯಕ್ತಿಯು ಅಪರಾಧಿಯೆಂದು ನಿರ್ಣೀತನಾದ ಮೇಲೆ, ಯಾವ ಗುತ್ತಿಗೆ ಅಥವಾ ಒಪ್ಪಂದದ ಮೇರೆಗೆ ಅಂಥ ಆವರಣವನ್ನು ಅಪರಾಧವು ಘಟಿಸಿದ ಕಾಲದಲ್ಲಿ ಗುತ್ತಿಗೆಗೆ ಕೊಡಲಾಗಿತ್ತೋ ಅಥವಾ ಪಡೆಯಲಾಗಿತ್ತೋ ಅಥವಾ ಅಧಿಭೋಗಕ್ಕೆ ತೆಗೆದುಕೊಳ್ಳಲಾಗಿತ್ತೋ ಅಂಥ ಗುತ್ತಿಗೆ ಅಥವಾ ಒಪ್ಪಂದವು ಸದರಿ ಅಪರಾಧ ನಿರ್ಣಯವಾದ ದಿನಾಂಕದಿಂದ ಶೂನ್ಯವೂ ನಿಷ್ಕ್ರಿಯವೂ ಆಗತಕ್ಕದ್ದು.

**4. ವೇಶ್ಯಾವೃತ್ತಿಯ ಗಳಿಕೆಯಿಂದ ಜೀವನ ನಡೆಸುವುದಕ್ಕಾಗಿ ದಂಡನೆ.–** (1) ಹದಿನೆಂಟು ವರ್ಷ ವಯಸ್ಸಿಗೆ ಮೀರಿದ ಯಾರೇ ವ್ಯಕ್ತಿಯು, ಇತರ ಯಾರೇ ವ್ಯಕ್ತಿಯ ವೇಶ್ಯಾವೃತ್ತಿಯ ಗಳಿಕೆಯಿಂದ ಸಂಪೂರ್ಣವಾಗಿ ಅಥವಾ ಭಾಗಶಃ ತಿಳಿದೂ ಜೀವನ ನಡೆಸಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಅಂಥ ಗಳಿಕೆಯು ಮಗುವಿನ ಅಥವಾ ಅಪ್ರಾಪ್ತ ವಯಸ್ಕನ ವೇಶ್ಯಾವೃತ್ತಿಗೆ ಸಂಬಂಧಿಸಿರುವಲ್ಲಿ, ಏಳು ವರ್ಷಗಳಿಗೆ ಕಡಿಮೆ ಇಲ್ಲದ ಆದರೆ ಹತ್ತು ವರ್ಷಗಳಿಗೆ ಮೀರದ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು.

(2) ಹದಿನೆಂಟು ವರ್ಷಗಳ ವಯಸ್ಸು ಮೀರಿದ ಯಾರೇ ವ್ಯಕ್ತಿಯು,–

(ಎ) ವೇಶ್ಯೆಯೊಂದಿಗೆ ವಾಸಿಸುತ್ತಿರುವನೆಂದು ಅಥವಾ ರೂಢಿಗತವಾಗಿ ಅವಳ ಜೊತೆಯಲ್ಲಿರುವನೆಂದು; ಅಥವಾ

(ಬಿ) ಅವಳ ವೇಶ್ಯಾವೃತ್ತಿಗೆ ಸಹಾಯ ಮಾಡುವ, ದುಷ್ಪ್ರೇರಣೆ ನೀಡುವ ಅಥವಾ ಅವಳನ್ನು ಒತ್ತಾಯಿಸುವನೆಂದು ತೋರುವಂಥ ರೀತಿಯಲ್ಲಿ, ಆ ವೇಶ್ಯೆಯ ಚಲನವಲನಗಳ ಮೇಲೆ ನಿಯಂತ್ರಣ, ನಿರ್ದೇಶನ ಅಥವಾ ಪ್ರಭಾವವನ್ನು ಬೀರುತ್ತಾನೆಂದು; ಅಥವಾ

(ಸಿ) ವೇಶ್ಯೆಯ ಪರವಾಗಿ ದಳ್ಳಾಳಿಯಾಗಿ ಅಥವಾ ತಲೆಹಿಡುಕನಾಗಿ ವರ್ತಿಸುತ್ತಿರುವನೆಂದು

– ರುಜುವಾತಾದರೆ (1)ನೇ ಉಪಪ್ರಕರಣದ ಅರ್ಥವ್ಯಾಪ್ತಿಯೊಳಗೆ, ಅಂಥ ವ್ಯಕ್ತಿಯು ತಿಳಿದೂ ತಿಳಿದೂ ಬೇರೊಬ್ಬ ವ್ಯಕ್ತಿಯ ವೇಶ್ಯಾವೃತ್ತಿಯ ಗಳಿಕೆಯಿಂದ ಜೀವಿಸುತ್ತಿದ್ದಾನೆಂದು, ತದ್ವಿರುದ್ಧವಾಗಿ ರುಜುವಾತಾಗುವವರೆಗೆ, ಪೂರ್ವಭಾವನೆ ಮಾಡತಕ್ಕದ್ದು.

**5. ವೇಶ್ಯಾವೃತ್ತಿಗಾಗಿ ವ್ಯಕ್ತಿಯನ್ನು ಒದಗಿಸುವುದು, ಪ್ರೇರೇಪಿಸುವುದು ಅಥವಾ ಕರೆದುಕೊಂಡು ಹೋಗುವುದು.**– (1) ಯಾರೇ ವ್ಯಕ್ತಿಯು,–

(ಎ) ವೇಶ್ಯಾವೃತ್ತಿಯ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯನ್ನು ಅವನ ಸಮ್ಮತಿಯಿಂದ ಅಥವಾ ಸಮ್ಮತಿ ಇಲ್ಲದೆಯೇ ಒದಗಿಸಿದರೆ ಅಥವಾ ಒದಗಿಸಲು ಪ್ರಯತ್ನಿಸಿದರೆ; ಅಥವಾ

(ಬಿ) ವೇಶ್ಯಾವೃತ್ತಿಯ ಉದ್ದೇಶಕ್ಕಾಗಿ ವೇಶ್ಯಾಗೃಹದ ನಿವಾಸಿಯಾಗಬೇಕೆಂಬ ಅಥವಾ ಆಗಾಗ್ಗೆ ಅಲ್ಲಿಗೆ ಹೋಗಬೇಕೆಂಬ ಉದ್ದೇಶದಿಂದ ಒಬ್ಬ ವ್ಯಕ್ತಿಯನ್ನು ಯಾವುದೇ ಸ್ಥಳದಿಂದ ಹೋಗಲು ಪ್ರೇರೇಪಿಸಿದರೆ; ಅಥವಾ

(ಸಿ) ವೇಶ್ಯಾವೃತ್ತಿಯನ್ನು ನಡೆಸುವ ಅಥವಾ ನಡೆಸುವುದಕ್ಕಾಗಿ ಪೋಷಣೆ ಮಾಡುವ ದೃಷ್ಟಿಯಿಂದ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಹೋದರೆ, ಅಥವಾ ಕರೆದುಕೊಂಡು ಹೋಗಲು ಪ್ರಯತ್ನಿಸಿದರೆ ಅಥವಾ ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಹೋಗುವಂತೆ ಮಾಡಿದರೆ; ಅಥವಾ

(ಡಿ) ಒಬ್ಬ ವ್ಯಕ್ತಿಯನ್ನು ವೇಶ್ಯಾವೃತ್ತಿ ನಡೆಸುವಂತೆ ಮಾಡಿದರೆ ಅಥವಾ ನಡೆಸಲು ಪ್ರೇರೇಪಿಸಿದರೆ

– ಅಪರಾಧವು ನಿರ್ಣಯವಾದ ಮೇಲೆ ಮೂರು ವರ್ಷಗಳಿಗೆ ಕಡಿಮೆ ಇಲ್ಲದ ಆದರೆ ಏಳು ವರ್ಷಗಳಿಗೆ ಮೀರದ ಕಠಿಣ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದಲೂ ಸಹ ದಂಡನೀಯನಾಗತಕ್ಕದ್ದು ಮತ್ತು ಈ ಉಪಪ್ರಕರಣದ ಮೇರೆಗೆ ಯಾವುದೇ ಅಪರಾಧವನ್ನು ಯಾರೇ ವ್ಯಕ್ತಿಯ ಇಚ್ಛೆಗೆ ವಿರುದ್ಧವಾಗಿ ಮಾಡಿದರೆ ಏಳು ವರ್ಷಗಳ ಅವಧಿಯ ಕಾರಾವಾಸದ ದಂಡನೆಯನ್ನು ಹದಿನಾಲ್ಕು ವರ್ಷಗಳ ಅವಧಿಯ ಕಾರಾವಾಸಕ್ಕೆ ವಿಸ್ತರಿಸತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗಿನ ಅಪರಾಧವನ್ನು ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಎಸಗಲಾಗಿದೆಯೋ ಆ ವ್ಯಕ್ತಿಯು,–

(i) ಮಗುವಾಗಿದ್ದರೆ, ಈ ಉಪಪ್ರಕರಣದ ಮೇರೆಗೆ ಉಪಬಂಧಿಸಿರುವ ದಂಡನೆಯು ಏಳು ವರ್ಷಗಳಿಗೆ ಕಡಿಮೆ ಇಲ್ಲದ ಆದರೆ ಜೀವಾವಧಿಯವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸಕ್ಕೆ ವಿಸ್ತರಿಸತಕ್ಕದ್ದು; ಮತ್ತು

(ii) ಅಪ್ರಾಪ್ತ ವಯಸ್ಕನಾಗಿದ್ದರೆ, ಈ ಉಪಪ್ರಕರಣದ ಮೇರೆಗೆ ಉಪಬಂಧಿಸಿರುವ ದಂಡನೆಯು ಏಳು ವರ್ಷಗಳಿಗೆ ಕಡಿಮೆ ಇಲ್ಲದ ಆದರೆ ಹದಿನಾಲ್ಕು ವರ್ಷಗಳಿಗೆ ಮೀರದ ಅವಧಿಯ ಕಠಿಣ ಕಾರಾವಾಸಕ್ಕೆ ವಿಸ್ತರಿಸತಕ್ಕದ್ದು.

(3) ಈ ಪ್ರಕರಣದ ಮೇರೆಗಿನ ಅಪರಾಧವನ್ನು,–

(ಎ) ಯಾವ ಸ್ಥಳದಿಂದ ವ್ಯಕ್ತಿಯನ್ನು ಒದಗಿಸಲಾಯಿತೋ, ಹೋಗಲು ಪ್ರೇರೇಪಿಸಲಾಯಿತೋ, ಕರೆದುಕೊಂಡು ಹೋಗಲಾಯಿತೋ ಅಥವಾ ಕರೆದುಕೊಂಡು ಹೋಗುವಂತೆ ಮಾಡಲಾಯಿತೋ ಅಥವಾ ಅಂಥ ವ್ಯಕ್ತಿಯನ್ನು ಒದಗಿಸಲು ಅಥವಾ ಕರೆದುಕೊಂಡು ಹೋಗಲು ಪ್ರಯತ್ನಿಸಲಾಯಿತೋ ಆ ಸ್ಥಳದಲ್ಲಿ; ಅಥವಾ

(ಬಿ) ಪ್ರೇರೇಪಣೆಯ ಪರಿಣಾಮವಾಗಿ, ಯಾವ ಸ್ಥಳಕ್ಕೆ ಅವನು ಹೋಗಿರಬಹುದೋ ಅಥವಾ ಅವನನ್ನು ಕರೆದುಕೊಂಡು ಹೋಗಲಾಯಿತೋ ಅಥವಾ ಕರೆದುಕೊಂಡು ಹೋಗುವಂತೆ ಮಾಡಲಾಯಿತೋ ಅಥವಾ ಕರೆದುಕೊಂಡು ಹೋಗಲು ಪ್ರಯತ್ನ ಮಾಡಲಾಯಿತೋ ಆ ಸ್ಥಳದಲ್ಲಿ

– ವಿಚಾರಣೆ ಮಾಡತಕ್ಕದ್ದು.

**6. ವೇಶ್ಯಾವೃತ್ತಿಯು ನಡೆಯುತ್ತಿರುವ ಆವರಣದಲ್ಲಿ ವ್ಯಕ್ತಿಯನ್ನು ತಡೆಹಿಡಿದಿಡುವುದು.**– (1) ಯಾರೇ ಒಬ್ಬ ವ್ಯಕ್ತಿಯು, ಇತರ ಯಾರೇ ವ್ಯಕ್ತಿಯನ್ನು ಅವನ ಸಮ್ಮತಿಯಿಂದ ಅಥವಾ ಸಮ್ಮತಿಯಿಲ್ಲದೆ,–

(ಎ) ಯಾವುದೇ ವೇಶ್ಯಾಗೃಹದಲ್ಲಿ, ಅಥವಾ

(ಬಿ) ಯಾವುದೇ ಆವರಣದಲ್ಲಿ ಅಂಥ ವ್ಯಕ್ತಿಯು, ಅವನ ಗಂಡ/ ಹೆಂಡತಿಯಲ್ಲದ ವ್ಯಕ್ತಿಯೊಂದಿಗೆ ಲೈಂಗಿಕ ಸಂಭೋಗ ಹೊಂದಲಿ ಎಂಬ ಉದ್ದೇಶದಿಂದ

– ತಡೆಹಿಡಿದಿರಿಸಿದ್ದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಏಳು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಜೀವಾವಧಿಯವರೆಗೆ ಇರಬಹುದಾದ ಅವಧಿಯ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ– ಇವೆರಡರಲ್ಲಿ ಯಾವುದೇ ಬಗೆಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು ಮತ್ತು ಜುಲ್ಮಾನೆಗೆ ಸಹ ಗುರಿಯಾಗತಕ್ಕದ್ದು:

ಪರಂತು, ನ್ಯಾಯಾಲಯವು, ಸಾಕಷ್ಟು ಮತ್ತು ವಿಶೇಷ ಕಾರಣಗಳನ್ನು ತೀರ್ಪಿನಲ್ಲಿ ನಮೂದಿಸಿ ಏಳು ವರ್ಷಗಳಿಗಿಂತ ಕಡಿಮೆ ಅವಧಿಯ ಕಾರಾವಾಸದ ಶಿಕ್ಷೆಯನ್ನು ವಿಧಿಸಬಹುದು.

(2) ವೇಶ್ಯಾಗೃಹದಲ್ಲಿ ಯಾರೇ ವ್ಯಕ್ತಿಯು ಮಗುವಿನೊಂದಿಗೆ ಇರುವುದು ಕಂಡುಬಂದರೆ, ತದ್ವಿರುದ್ಧವಾದುದು ರುಜುವಾತಾದ ಹೊರತು, ಅವನು (1)ನೇ ಉಪಪ್ರಕರಣದ ಮೇರೆಗೆ ಅಪರಾಧವನ್ನು ಮಾಡಿರುವುದಾಗಿ ಪೂರ್ವಭಾವನೆ ಮಾಡತಕ್ಕದ್ದು.

(2ಎ) ವೇಶ್ಯಾಗೃಹದಲ್ಲಿ ಕಂಡುಬಂದ ಮಗು ಅಥವಾ ಅಪ್ರಾಪ್ತ ವಯಸ್ಕನು ವೈದ್ಯಕೀಯ ಪರೀಕ್ಷೆಯ ತರುವಾಯ ಲೈಂಗಿಕವಾಗಿ ದುರುಪಯೋಗಕ್ಕೆ ಒಳಗಾಗಿರುವುದು ಪತ್ತೆಯಾಗಿರುವಲ್ಲಿ, ತದ್ವಿರುದ್ಧವಾದುದು ರುಜುವಾತಾದ ಹೊರತು, ಆ ಮಗು ಅಥವಾ ಅಪ್ರಾಪ್ತ ವಯಸ್ಕನನ್ನು ವೇಶ್ಯಾವೃತ್ತಿಯ ಉದ್ದೇಶಗಳಿಗಾಗಿ ತಡೆಹಿಡಿದಿಡಲಾಗಿತ್ತೆಂದು ಅಥವಾ ಸಂದರ್ಭಾನುಸಾರ ವ್ಯಾಪಾರದ ಉದ್ದೇಶಗಳಿಗಾಗಿ ಲೈಂಗಿಕವಾಗಿ ಶೋಷಣೆಗೊಳಪಡಿಸಲಾಗಿತ್ತೆಂದು ಪೂರ್ವಭಾವನೆ ಮಾಡತಕ್ಕದ್ದು.

(3) ಒಬ್ಬ ವ್ಯಕ್ತಿಯು ಒಬ್ಬ ಮಹಿಳೆ ಅಥವಾ ಬಾಲಕಿಯನ್ನು ವೇಶ್ಯಾಗೃಹದಲ್ಲಿ ಅಥವಾ ಅದರ ಯಾವುದೇ ಆವರಣದಲ್ಲಿ ಇರುವಂತೆ ಒತ್ತಾಯಪಡಿಸುವ ಅಥವಾ ಪ್ರೇರೇಪಿಸುವ ಉದ್ದೇಶದಿಂದ,–

(ಎ) ಅವಳಿಗೆ ಸೇರಿದ ಯಾವುದೇ ಆಭರಣ, ಉಡುಗೆ–ತೊಡುಗೆ, ಹಣ ಅಥವಾ ಇತರ ಸ್ವತ್ತನ್ನು ಅವಳಿಗೆ ಕೊಡದೆ ಇಟ್ಟುಕೊಂಡರೆ, ಅಥವಾ

(ಬಿ) ಅಂಥ ವ್ಯಕ್ತಿಯಿಂದ ಅಥವಾ ಅವನ ನಿರ್ದೇಶನದ ಮೇರೆಗೆ ಅವಳಿಗೆ ಎರವಲು ಕೊಟ್ಟಿದ್ದ ಅಥವಾ ಒದಗಿಸಿದ್ದ ಯಾವುದೇ ಆಭರಣ, ಉಡುಗೆ–ತೊಡುಗೆ, ಹಣ ಅಥವಾ ಇತರ ಸ್ವತ್ತನ್ನು, ಅವಳು ತನ್ನ ಜೊತೆಗೆ ತೆಗೆದುಕೊಂಡು ಹೋದರೆ ಅವಳ ವಿರುದ್ಧ ಕಾನೂನು ವ್ಯವಹರಣೆಗಳನ್ನು ಹೂಡುವುದಾಗಿ ಬೆದರಿಕೆ ಹಾಕಿದರೆ

– ಅಂಥ ವ್ಯಕ್ತಿಯು ಅವಳನ್ನು ಅವಳ ಕಾನೂನುಬದ್ಧ ಪತಿಯಲ್ಲದ ಇತರ ಪುರುಷನೊಂದಿಗೆ ಲೈಂಗಿಕ ಸಂಭೋಗದ ಉದ್ದೇಶಕ್ಕಾಗಿ ಅಲ್ಲಿ ತಡೆಹಿಡಿದಿಟ್ಟಿದ್ದಾನೆಂದು ಪೂರ್ವಭಾವನೆ ಮಾಡತಕ್ಕದ್ದು.

(4) ತದ್ವಿರುದ್ಧವಾಗಿ ಯಾವುದೇ ಕಾನೂನು ಇದ್ದರೂ, ಅವಳನ್ನು ತಡೆಹಿಡಿದಿಟ್ಟಿರುವ ವ್ಯಕ್ತಿಯು ಅಂಥ ಸ್ತ್ರೀಗೆ ಅಥವಾ ಬಾಲಕಿಗೆ ಎರವಲಾಗಿ ಕೊಟ್ಟಿದ್ದಾನೆ ಅಥವಾ ಒದಗಿಸಿದ್ದಾನೆ ಎಂದು ಅಥವಾ ಅಂಥ ಸ್ತ್ರೀ ಅಥವಾ ಬಾಲಕಿಯು ಒತ್ತೆಯಿಟ್ಟಿದ್ದಾಳೆ ಎಂದು ಹೇಳಲಾಗಿರುವ ಯಾವುದೇ ಆಭರಣ, ಉಡುಗೆ–ತೊಡುಗೆ ಅಥವಾ ಇತರ ಸ್ವತ್ತನ್ನು ವಾಪಸ್ಸು ಪಡೆಯುವುದಕ್ಕಾಗಿ, ಅಂಥ ಸ್ತ್ರೀ ಅಥವಾ ಬಾಲಕಿಯಿಂದ ಸಂದಾಯವಾಗಬೇಕಾಗಿದೆ ಎಂದು ಹೇಳಲಾದ ಯಾವುದೇ ಹಣವನ್ನು ವಾಪಸ್ಸು ಪಡೆಯುವುದಕ್ಕಾಗಿ ಅಂಥ ಸ್ತ್ರೀಯ ಅಥವಾ ಬಾಲಕಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**7. ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ವೇಶ್ಯಾವೃತ್ತಿ ನಡೆಸುವುದು.**- (1) ಯಾರೇ ವ್ಯಕ್ತಿಯು,-

(ಎ) 3ನೇ ಉಪಪ್ರಕರಣದ ಮೇರೆಗೆ ಅಧಿಸೂಚಿಸಲಾದ ಪ್ರದೇಶದಲ್ಲಿ ಅಥವಾ ಪ್ರದೇಶಗಳಲ್ಲಿ, ಅಥವಾ

(ಬಿ) ಯಾವುದೇ ಸಾರ್ವಜನಿಕ, ಧಾರ್ಮಿಕ ಪೂಜಾಸ್ಥಳದ, ಶಿಕ್ಷಣ ಸಂಸ್ಥೆಯ, ಹಾಸ್ಟೆಲಿನ, ಆಸ್ಪತ್ರೆಯ, ನರ್ಸಿಂಗ್ ಹೋಂ ಅಥವಾ ಪೊಲೀಸ್ ಕಮೀಷನರನು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನು ಈ ಸಂಬಂಧದಲ್ಲಿ ನಿಯಮಿಸಿದ ರೀತಿಯಲ್ಲಿ ಅಧಿಸೂಚಿಸಬಹುದಾದಂಥ ಯಾವುದೇ ಬಗೆಯ ಇತರ ಸಾರ್ವಜನಿಕ ಸ್ಥಳದ ಎರಡು ನೂರು ಮೀಟರುಗಳ ಅಂತರದಲ್ಲಿ ಇರುವ

- ಯಾವುದೇ ಆವರಣದಲ್ಲಿ ವೇಶ್ಯಾವೃತ್ತಿ ನಡೆಸಿದರೆ, ಅವನು ಮತ್ತು ಅಂಥ ವೇಶ್ಯಾವೃತ್ತಿಯನ್ನು ಯಾವ ವ್ಯಕ್ತಿಯೊಂದಿಗೆ ನಡೆಸಲಾಯಿತೋ ಆ ವ್ಯಕ್ತಿಯು ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು.

(1ಎ) (1)ನೇ ಉಪಪ್ರಕರಣದ ಮೇರೆಗೆ ಎಸಗಲಾದ ಅಪರಾಧವು ಮಗುವಿಗೆ ಅಥವಾ ಅಪ್ರಾಪ್ತ ವಯಸ್ಕನಿಗೆ ಸಂಬಂಧಿಸಿರುವಲ್ಲಿ, ಆ ಅಪರಾಧವನ್ನು ಎಸಗುವ ವ್ಯಕ್ತಿಯು ಏಳು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಆದರೆ ಜೀವಾವಧಿಯವರೆಗೆ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಯಾವುದೇ ಬಗೆಯ ಕಾರಾವಾಸದಿಂದ ದಂಡನೀಯನಾಗತಕ್ಕುದು ಮತ್ತು ಜುಲ್ಮಾನೆಗೂ ಗುರಿಯಾಗತಕ್ಕದ್ದು:

ಪರಂತು, ನ್ಯಾಯಾಲಯವು, ಸಾಕಷ್ಟು ಮತ್ತು ವಿಶೇಷ ಕಾರಣಗಳನ್ನು ತೀರ್ಪಿನಲ್ಲಿ ನಮೂದಿಸಿ ಏಳು ವರ್ಷಗಳಿಗಿಂತ ಕಡಿಮೆ ಅವಧಿಯ ಕಾರಾವಾಸದ ಶಿಕ್ಷೆಯನ್ನು ವಿಧಿಸಬಹುದು.

(2) ಯಾರೇ ವ್ಯಕ್ತಿಯು,-

(ಎ) ಯಾವುದೇ ಸಾರ್ವಜನಿಕ ಸ್ಥಳದ ರಕ್ಷಕನಾಗಿದ್ದು, ವೇಶ್ಯೆಯರು ಅಂಥ ಸ್ಥಳದಲ್ಲಿ ತಮ್ಮ ವೃತ್ತಿಯ ಉದ್ದೇಶಗಳಿಗಾಗಿ ತಂಗಲು ಅಥವಾ ಅಲ್ಲಿ ಇರಲು ತಿಳಿದೂ ಅವಕಾಶ ಕೊಟ್ಟರೆ; ಅಥವಾ

(ಬಿ) (1)ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಆವರಣದ ಬಾಡಿಗೆದಾರನಾಗಿದ್ದು, ಗುತ್ತಿಗೆಗೆ ಪಡೆದವನಾಗಿದ್ದು, ಅಧಿಭೋಗದಾರನಾಗಿದ್ದು ಅಥವಾ ಮೇಲ್ವಿಚಾರಕನಾಗಿದ್ದು, ಅದನ್ನು ಅಥವಾ ಅದರ ಯಾವುದೇ ಭಾಗವನ್ನು ವೇಶ್ಯಾವೃತ್ತಿಗಾಗಿ ಉಪಯೋಗಿಸಲು ತಿಳಿದೂ ಅವಕಾಶ ಕೊಟ್ಟರೆ; ಅಥವಾ

(ಸಿ) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಆವರಣದ ಒಡೆಯನಾಗಿದ್ದು, ಗುತ್ತಿಗೆಗೆ ಕೊಟ್ಟವನಾಗಿದ್ದು ಅಥವಾ ಮಾಲೀಕನಾಗಿದ್ದು ಅಥವಾ ಅಂಥ ಒಡೆಯನ, ಗುತ್ತಿಗೆಗೆ ಕೊಟ್ಟವನ ಅಥವಾ ಮಾಲೀಕನ ಏಜೆಂಟನಾಗಿದ್ದು, ಅದನ್ನು ಅಥವಾ ಅದರ ಯಾವುದೇ ಭಾಗವನ್ನು ವೇಶ್ಯಾವೃತ್ತಿಗಾಗಿ ಉಪಯೋಗಿಸಲಾಗುವುದೆಂದು ತಿಳಿದೂ ಅದನ್ನು ಅಥವಾ ಅದರ ಯಾವುದೇ ಭಾಗವನ್ನು ಬಾಡಿಗೆಗೆ ಕೊಟ್ಟರೆ ಅಥವಾ ಹಾಗೆ ಉಪಯೋಗಿಸುವಲ್ಲಿ ಬುದ್ಧಿಪೂರ್ವಕವಾಗಿ ಭಾಗಿಯಾದರೆ

- ಅವನು ಮೊದಲನೆಯ ಅಪರಾಧ ನಿರ್ಣಯವಾದ ತರುವಾಯ ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯವಾದ ಸಂದರ್ಭದಲ್ಲಿ, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದಲೂ ದಂಡನೀಯನಾಗತಕ್ಕದ್ದು ಮತ್ತು ಆ ಸಾರ್ವಜನಿಕ ಸ್ಥಳ ಅಥವಾ ಆವರಣವು ಹೋಟೆಲು ಆಗಿದ್ದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅಂಥ ಹೋಟೆಲಿನ ವ್ಯವಹಾರವನ್ನು ನಡೆಸುವುದಕ್ಕೆ ಕೊಟ್ಟಿರುವ ಲೈಸೆನ್ಸು ಮೂರು ತಿಂಗಳುಗಳಿಗೆ ಕಡಿಮೆ ಇಲ್ಲದ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯವರೆಗೆ ಅಮಾನತುಗೊಳ್ಳುವುದಕ್ಕೆ ಗುರಿಯಾಗತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಎಸಗಲಾದ ಅಪರಾಧವು ಹೋಟೆಲಿನಲ್ಲಿ ಇರುವ ಮಗು ಅಥವಾ ಅಪ್ರಾಪ್ತ ವಯಸ್ಕನಿಗೆ ಸಂಬಂಧಿಸಿದ್ದರೆ ಅಂಥ ಹೋಟೆಲಿನ ಲೈಸೆನ್ಸು ರದ್ದಾಗುವುದಕ್ಕೆ ಸಹ ಗುರಿಯಾಗತಕ್ಕದ್ದು.

**ವಿವರಣೆ.**- ಈ ಉಪಪ್ರಕರಣದ ಉದ್ದೇಶಗಳಿಗಾಗಿ "ಹೋಟೆಲು" ಎಂಬ ಪದವು ಹೋಟೆಲು ಜಮೆ ತೆರಿಗೆ ಅಧಿನಿಯಮ, 1980 (1980ರ 54)ರ 2ನೇ ಪ್ರಕರಣದ (6)ನೇ ಖಂಡದಲ್ಲಿ ಕೊಟ್ಟಿರುವ ಅರ್ಥವನ್ನು ಹೊಂದಿರತಕ್ಕದ್ದು.

(3) ರಾಜ್ಯ ಸರ್ಕಾರವು, ರಾಜ್ಯದಲ್ಲಿರುವ ಯಾವುದೇ ಪ್ರದೇಶ ಅಥವಾ ಪ್ರದೇಶಗಳಿಗೆ ಮೇಲಿಂದ ಮೇಲೆ ಬರುವ ಬಗೆಬಗೆಯ ವ್ಯಕ್ತಿಗಳು, ಅಲ್ಲಿನ ಜನಸಂಖ್ಯೆಯ ಸ್ವರೂಪ ಮತ್ತು ಸಾಂದ್ರತೆ ಮತ್ತು ಸಂಬಂಧಪಟ್ಟ ಇತರ ಸುಸಂಬದ್ಧ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ಪ್ರದೇಶದಲ್ಲಿ ಅಥವಾ ಪ್ರದೇಶಗಳಲ್ಲಿ ವೇಶ್ಯಾವೃತ್ತಿಯನ್ನು ನಡೆಸತಕ್ಕದ್ದಲ್ಲವೆಂದು ನಿರ್ದೇಶಿಸಬಹುದು.

(4) ಯಾವುದೇ ಪ್ರದೇಶಕ್ಕೆ ಅಥವಾ ಪ್ರದೇಶಗಳಿಗೆ ಸಂಬಂಧಿಸಿದಂತೆ (3)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿರುವಲ್ಲಿ, ರಾಜ್ಯ ಸರ್ಕಾರವು ಆ ಅಧಿಸೂಚನೆಯಲ್ಲಿ ಅಂಥ ಪ್ರದೇಶದ ಅಥವಾ ಪ್ರದೇಶಗಳ ಪರಿಮಿತಿಗಳನ್ನು ಯುಕ್ತ ರೀತಿಯಲ್ಲಿ ನಿರ್ದಿಷ್ಟವಾಗಿ ನಿರ್ಧರಿಸತಕ್ಕದ್ದು.

(5) ಅಂಥ ಯಾವುದೇ ಅಧಿಸೂಚನೆಯನ್ನು, ಅದನ್ನು ಹೊರಡಿಸಿದ ದಿನಾಂಕದ ತರುವಾಯ ತೊಂಬತ್ತು ದಿವಸಗಳ ಅವಧಿಯು ಮುಗಿಯುವುದಕ್ಕಿಂತ ಮುಂಚಿನ ದಿನಾಂಕದಿಂದ ಜಾರಿಗೆ ಬರುವಂತೆ ಹೊರಡಿಸತಕ್ಕದ್ದಲ್ಲ.

**8. ವೇಶ್ಯಾವೃತ್ತಿಯ ಉದ್ದೇಶಕ್ಕಾಗಿ ದುರ್ಮಾರ್ಗಕ್ಕೆ ಪ್ರೇರೇಪಿಸುವುದು ಅಥವಾ ಆಹ್ವಾನಿಸುವುದು.**- ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಥವಾ ಸಾರ್ವಜನಿಕ ಸ್ಥಳಕ್ಕೆ ಯಾವುದೇ ಕಟ್ಟಡದೊಳಗಿಂದಾಗಲಿ ಅಥವಾ ಮನೆಯೊಳಗಿಂದಾಗಲಿ ಕಾಣುವಂತೆ ಮತ್ತು ಕಾಣುವಂತಹ ಅಥವಾ ಕೇಳಬಹುದಾದಂಥ ರೀತಿಯಲ್ಲಿ,-

(ಎ) ಕಟ್ಟಡದ ಅಥವಾ ಮನೆಯ ಕಿಟಕಿಯ ಬಳಿ ಅಥವಾ ಮಹಡಿಯ ಮೊಗಸಾಲೆಯ ಮೇಲೆ ಕುಳಿತುಕೊಂಡಾಗಲಿ ಅಥವಾ ಇತರ ರೀತಿಯಲ್ಲಾಗಲಿ ಮಾತು, ಸನ್ನೆಯಿಂದ ತನ್ನ ಶರೀರವನ್ನು ಬುದ್ಧಿಪೂರ್ವಕವಾಗಿ ಪ್ರದರ್ಶಿಸಿಕೊಳ್ಳುವುದು - ಇವುಗಳ ಮೂಲಕ ಅಥವಾ ಬೇರೆ ರೀತಿಯಲ್ಲಿ ವೇಶ್ಯಾವೃತ್ತಿಯ ಉದ್ದೇಶಕ್ಕಾಗಿ ಯಾರೇ ವ್ಯಕ್ತಿಯನ್ನು ಪ್ರಲೋಭಿಸುವ ಅಥವಾ ಪ್ರಲೋಭಿಸಲು ಯತ್ನಿಸುವ ಅಥವಾ ಅವನ ಗಮನವನ್ನು ಸೆಳೆಯುವ ಅಥವಾ ಸೆಳೆಯಲು ಯತ್ನಿಸುವ; ಅಥವಾ

(ಬಿ) ವೇಶ್ಯಾವೃತ್ತಿಯ ಉದ್ದೇಶಕ್ಕಾಗಿ ಯಾರೇ ವ್ಯಕ್ತಿಯನ್ನು ಆಹ್ವಾನಿಸುವ ಅಥವಾ ಪೀಡಿಸುವ ಅಥವಾ ಅಂಥ ಸಾರ್ವಜನಿಕ ಸ್ಥಳದ ಸಮೀಪದಲ್ಲಿ ವಾಸಿಸುವ ಅಥವಾ ಆ ಮೂಲಕ ಹಾಯ್ದುಹೋಗುವ ವ್ಯಕ್ತಿಗಳಿಗೆ ಅಡ್ಡಿಯಾಗುವ ಅಥವಾ ತೊಂದರೆಯಾಗುವ ರೀತಿಯಲ್ಲಿ ಅಥವಾ ಸಾರ್ವಜನಿಕ ಸಭ್ಯತೆಗೆ ಭಂಗ ತರುವಂಥ ರೀತಿಯಲ್ಲಿ ಅಡ್ಡಾಡುವ ಅಥವಾ ವರ್ತಿಸುವ

- ಯಾರೇ ಆಗಲಿ ಮೊದಲನೇ ಅಪರಾಧ ನಿರ್ಣಯವಾದ ತರುವಾಯ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಎರಡನೇ ಅಥವಾ ತರುವಾಯದ ಅಪರಾಧ ನಿರ್ಣಯವಾದ ಸಂದರ್ಭದಲ್ಲಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದಲೂ ದಂಡನೀಯನಾಗತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗಿನ ಅಪರಾಧವನ್ನು ಪುರುಷನು ಮಾಡಿರುವಲ್ಲಿ ಅವನು ಏಳು ದಿನಗಳಿಗಿಂತ ಕಡಿಮೆ ಇಲ್ಲದ ಆದರೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು.

**9. ಅಭಿರಕ್ಷೆಯಲ್ಲಿರುವ ವ್ಯಕ್ತಿಯನ್ನು ದುರ್ಮಾರ್ಗಕ್ಕೆ ಎಳೆಯುವುದು.**- (1) ಯಾರೇ ವ್ಯಕ್ತಿಯನ್ನು ತನ್ನ ಅಭಿರಕ್ಷೆಯಲ್ಲಿ, ವಶದಲ್ಲಿ ಅಥವಾ ಆರೈಕೆಯಲ್ಲಿ ಇಟ್ಟುಕೊಂಡಿರುವ ವ್ಯಕ್ತಿಯು, ವೇಶ್ಯಾವೃತ್ತಿಗಾಗಿ ಆ ವ್ಯಕ್ತಿಯನ್ನು ದುರ್ಮಾರ್ಗಕ್ಕೆ ಎಳೆಯಲು ಕಾರಣವಾದರೆ ಅಥವಾ ಅದಕ್ಕೆ ಸಹಾಯ ಮಾಡಿದರೆ ಅಥವಾ ದುಷ್ಪ್ರೇರಿಸಿದರೆ, ಆ ವ್ಯಕ್ತಿಯು ಅಪರಾಧ ನಿರ್ಣಯವಾದ ತರುವಾಯ ಏಳು ವರ್ಷಗಳಿಗಿಂತ ಕಡಿಮೆಯಲ್ಲದ ಆದರೆ ಜೀವಾವಧಿ

ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ, ಇವೆರಡರಲ್ಲಿ ಯಾವುದೇ ಬಗೆಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು:

ಪರಂತು, ನ್ಯಾಯಾಲಯವು ತೀರ್ಪಿನಲ್ಲಿ ಸಾಕಷ್ಟು ಮತ್ತು ವಿಶೇಷ ಕಾರಣ ನಮೂದಿಸಿ ಏಳು ವರ್ಷಗಳಿಗಿಂತ ಕಡಿಮೆ ಅವಧಿಯ ಕಾರಾವಾಸದ ಶಿಕ್ಷೆಯನ್ನು ವಿಧಿಸಬಹುದು.

**10. ಸನ್ನಡತೆಯ ಪರಿವೀಕ್ಷಣೆಯ ಮೇಲೆ ಅಥವಾ ಯುಕ್ತ ವಾಗ್ದಂಡನೆಯ ತರುವಾಯದ ಬಿಡುಗಡೆ.**- ಸ್ತ್ರೀಯರ ಮತ್ತು ಬಾಲಕಿಯರ ಅನೈತಿಕ ವ್ಯವಹಾರ ದಮನ (ತಿದ್ದುಪಡಿ) ಅಧಿನಿಯಮ, 1986 (1986ರ 44)ರ 13ನೇ ಪ್ರಕರಣದ ಮೂಲಕ (26.1.1987 ರಿಂದ ಜಾರಿಗೆ ಬರುವಂತೆ) ನಿರಸನಗೊಳಿಸಲಾಗಿದೆ.

**10ಎ. ಸುಧಾರಕ ಸಂಸ್ಥೆಯಲ್ಲಿ ತಡೆಹಿಡಿದಿಡುವುದು.**- (1) (ಎ) ಒಬ್ಬ ಮಹಿಳಾ ಅಪರಾಧಿಯು 7ನೇ ಪ್ರಕರಣ ಅಥವಾ 8ನೇ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ತಪ್ಪಿತಸ್ಥಳೆಂದು ರುಜುವಾತಾಗಿರುವಲ್ಲಿ; ಮತ್ತು

(ಬಿ) ಅಪರಾಧಿಯ ಚಾರಿತ್ರ್ಯ, ಆರೋಗ್ಯದ ಸ್ಥಿತಿ ಹಾಗೂ ಮಾನಸಿಕ ಸ್ಥಿತಿ ಮತ್ತು ಪ್ರಕರಣದ ಇತರ ಪರಿಸ್ಥಿತಿಗಳು ಅವಳ ಸುಧಾರಣೆಗೆ ಸಹಾಯಕವಾಗುವಂಥ ಅವಧಿಯವರೆಗೆ ಅವಳನ್ನು ತಡೆಹಿಡಿದಿಡುವುದು ಮತ್ತು ಅಂಥ ಶಿಕ್ಷಣ ಮತ್ತು ಶಿಸ್ತಿನ ಕ್ರಮಕ್ಕೆ ಒಳಪಡಿಸುವುದು ವಿಹಿತವಾಗಿರುವಂಥವು ಆಗಿರುವಲ್ಲಿ

- ನ್ಯಾಯಾಲಯವು ಕಾರಾವಾಸದ ಶಿಕ್ಷೆಗೆ ಬದಲಾಗಿ ಅದು ಸೂಕ್ತವೆಂದು ಭಾವಿಸುವಂಥ ಎರಡು ವರ್ಷಗಳಿಗಿಂತ ಕಡಿಮೆಯಲ್ಲದ ಮತ್ತು ಐದು ವರ್ಷಗಳಿಗಿಂತ ಹೆಚ್ಚಾಗಿಲ್ಲದಂಥ ಅವಧಿಯವರೆಗೆ ಸುಧಾರಕ ಸಂಸ್ಥೆಯಲ್ಲಿ ತಡೆಹಿಡಿದಿಡುವ ಆದೇಶವನ್ನು ಹೊರಡಿಸುವುದು ಅದಕ್ಕೆ ಕಾನೂನು ಸಮ್ಮತವಾಗತಕ್ಕದ್ದು:

ಪರಂತು, ಅಂಥ ಆದೇಶವನ್ನು ಹೊರಡಿಸುವುದಕ್ಕೆ ಮೊದಲು,-

(i) ನ್ಯಾಯಾಲಯವು ಅಪರಾಧಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಕೊಡತಕ್ಕದ್ದು ಮತ್ತು ಅಂಥ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುವುದಕ್ಕಾಗಿ ಆ ಪ್ರಕರಣದ ಸೂಕ್ತತೆಯ ಬಗ್ಗೆ ಅಪರಾಧಿಯು ಸಲ್ಲಿಸಬಹುದಾದ ಮನವಿಯನ್ನು ಹಾಗೂ ನ್ಯಾಯಾಲಯಕ್ಕೆ ಅಪರಾಧಿಗಳ ಪರಿವೀಕ್ಷಣೆ ಅಧಿನಿಯಮ, 1958ರ (1958ರ 20) ಮೇರೆಗೆ ನೇಮಕ ಮಾಡಲಾದ ಪರಿವೀಕ್ಷಣಾಧಿಕಾರಿಯು ಸಲ್ಲಿಸಿದ ವರದಿಯನ್ನು ಸಹ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು; ಮತ್ತು

(ii) ನ್ಯಾಯಾಲಯವು, ಅಪರಾಧಿಯ ಚಾರಿತ್ರ್ಯ, ಆರೋಗ್ಯದ ಸ್ಥಿತಿ ಮತ್ತು ಮಾನಸಿಕ ಸ್ಥಿತಿ ಮತ್ತು ಪ್ರಕರಣದ ಇತರ ಪರಿಸ್ಥಿತಿಗಳು ಹಿಂದೆ ಹೇಳಿದಂಥ ಶಿಕ್ಷಣ ಮತ್ತು ಶಿಸ್ತಿನ ಕ್ರಮದಿಂದ ಅಪರಾಧಿಯು ಪ್ರಯೋಜನ ಪಡೆಯಬಹುದಾದಂಥವು ಆಗಿವೆ ಎಂದು ಅದಕ್ಕೆ ಮನದಟ್ಟಾಗಿರುವುದಾಗಿ ದಾಖಲು ಮಾಡತಕ್ಕದ್ದು.

(2) (3)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಅಪೀಲು, ನಿರ್ದೇಶನ ಮತ್ತು ಪುನರೀಕ್ಷಣೆಗೆ ಸಂಬಂಧಪಟ್ಟಂತೆ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು ಮತ್ತು ಅಪೀಲನ್ನು ಯಾವ ಅವಧಿಯೊಳಗೆ ಸಲ್ಲಿಸತಕ್ಕದ್ದೋ ಆ ಅವಧಿಗೆ ಸಂಬಂಧಿಸಿದಂತೆ ಕಾಲಪರಿಮಿತಿ ಅಧಿನಿಯಮ, 1963ರ (1963ರ 36) ಉಪಬಂಧಗಳು, (1)ನೇ ಉಪಪ್ರಕರಣದ ಮೇರೆಗಿನ ತಡೆಹಿಡಿದಿಡುವ ಆದೇಶಕ್ಕೆ ಸಂಬಂಧಪಟ್ಟಂತೆ, ಆ ಆದೇಶವು ತಡೆಹಿಡಿದಿಡುವ ಆದೇಶವನ್ನು ಯಾವ ಅವಧಿಗೆ ಮಾಡಲಾಗಿದೆಯೋ ಅದೇ ಅವಧಿಯ ಕಾರಾವಾಸದ ಶಿಕ್ಷೆಯಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(3) ಈ ಬಗ್ಗೆ ರಚಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಸುಧಾರಕ ಸಂಸ್ಥೆಯಲ್ಲಿ ತಡೆಹಿಡಿದಿಡಲು ಮಾಡಿದ ಆದೇಶದ ದಿನಾಂಕದಿಂದ ಆರು ತಿಂಗಳು ಮುಕ್ತಾಯವಾದ ತರುವಾಯ ಯಾವುದೇ ಸಮಯದಲ್ಲಿ, ರಾಜ್ಯ ಸರ್ಕಾರವು ಅಥವಾ ಈ ಬಗ್ಗೆ ಅಧಿಕೃತಗೊಳಿಸಲಾದ ಪ್ರಾಧಿಕಾರವು ಆ ಅಪರಾಧಿಯು ಉಪಯುಕ್ತ ಮತ್ತು ಶ್ರಮಶೀಲ ಜೀವನವನ್ನು ಯುಕ್ತವಾಗಿ ನಡೆಸುವ ಸಾಧ್ಯತೆ ಇದೆ ಎಂದು ಅದಕ್ಕೆ ಮನದಟ್ಟಾದರೆ ಷರತ್ತಿಲ್ಲದೆ ಅಥವಾ ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳೊಂದಿಗೆ ಆಕೆಯನ್ನು ಅಂಥ ಸಂಸ್ಥೆಯಿಂದ ಬಿಡುಗಡೆ

ಮಾಡಬಹುದು ಮತ್ತು ನಿಯಮಿಸಬಹುದಾದಂಥ ನಮೂನೆಯಲ್ಲಿ ಆಕೆಗೆ ಒಂದು ಲಿಖಿತ ಲೈಸೆನ್ಸನ್ನು ಕೊಡಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ಯಾವ ಷರತ್ತುಗಳ ಮೇಲೆ ಅಪರಾಧಿಯನ್ನು ಬಿಡುಗಡೆ ಮಾಡಲಾಯಿತೋ ಆ ಷರತ್ತುಗಳು, ಅಪರಾಧಿಯ ನಿವಾಸ ಮತ್ತು ಅಪರಾಧಿಯ ಚಟುವಟಿಕೆಗಳು ಮತ್ತು ಚಲನವಲನಗಳ ಮೇಲೆ ನಿಗಾ ಇಡುವುದಕ್ಕೆ ಸಂಬಂಧಪಟ್ಟ ಅಗತ್ಯತೆಗಳನ್ನು ಒಳಗೊಳ್ಳಬಹುದು.

**11. ಈ ಹಿಂದೆ ಅಪರಾಧಿಗಳೆಂದು ನಿರ್ಣೀತರಾದವರ ವಿಳಾಸಗಳ ಅಧಿಸೂಚನೆ.–** (1) ಯಾರೇ ವ್ಯಕ್ತಿಯು,–

(ಎ) ಈ ಅಧಿನಿಯಮದ ಮೇರೆಗೆ ಅಥವಾ ಭಾರತ ದಂಡ ಸಂಹಿತೆಯ (1860ರ 45) 363ನೇ ಪ್ರಕರಣ, 365ನೇ ಪ್ರಕರಣ, 366ನೇ ಪ್ರಕರಣ, 366ಎ ಪ್ರಕರಣ, 366ಬಿ ಪ್ರಕರಣ, 367ನೇ ಪ್ರಕರಣ, 368ನೇ ಪ್ರಕರಣ, 370ನೇ ಪ್ರಕರಣ, 371ನೇ ಪ್ರಕರಣ, 372ನೇ ಪ್ರಕರಣ ಅಥವಾ 373ನೇ ಪ್ರಕರಣದ ಮೇರೆಗೆ ಎರಡು ವರ್ಷಗಳ ಅಥವಾ ಅದಕ್ಕೂ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧದ ಬಗ್ಗೆ ಭಾರತದಲ್ಲಿನ ಒಂದು ನ್ಯಾಯಾಲಯದಿಂದ; ಅಥವಾ

(ಬಿ) ಯಾವ ಅಪರಾಧವನ್ನು ಭಾರತದಲ್ಲಿ ಮಾಡಿದ್ದರೆ, ಈ ಅಧಿನಿಯಮದ ಮೇರೆಗೆ ಅಥವಾ ಮೇಲೆ ಹೇಳಿದ ಪ್ರಕರಣಗಳ ಪೈಕಿ ಯಾವುದೇ ಪ್ರಕರಣದ ಮೇರೆಗೆ ಅದು ಅದೇ ಅವಧಿಯ ಕಾರಾವಾಸದಿಂದ ದಂಡನೀಯವಾಗಬಹುದಾಗಿತ್ತೋ ಅಂಥ ಅಪರಾಧದ ಬಗ್ಗೆ ಇತರ ಯಾವುದೇ ದೇಶದಲ್ಲಿನ ಒಂದು ನ್ಯಾಯಾಲಯದಿಂದ ಅಥವಾ ನ್ಯಾಯಾಧಿಕರಣದಿಂದ

– ಅಪರಾಧಿಯೆಂದು ನಿರ್ಣೀತನಾಗಿದ್ದು, ಅವನು ಕಾರಾಗೃಹದಿಂದ ಬಿಡುಗಡೆಯಾದ ತರುವಾಯದ ಐದು ವರ್ಷಗಳ ಅವಧಿಯೊಳಗೆ, ಒಂದು ನ್ಯಾಯಾಲಯದಿಂದ ಈ ಅಧಿನಿಯಮದ ಮೇರೆಗೆ ಅಥವಾ ಆ ಪ್ರಕರಣಗಳ ಪೈಕಿ ಯಾವುದೇ ಪ್ರಕರಣದ ಮೇರೆಗೆ ಎರಡು ವರ್ಷಗಳ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಪುನಃ ಅಪರಾಧಿಯೆಂದು ನಿರ್ಣೀತನಾದರೆ, ಅಂಥ ನ್ಯಾಯಾಲಯವು, ಸೂಕ್ತವೆಂದು ಭಾವಿಸಿದರೆ, ಅಂಥ ಕಾರಾವಾಸದ ಶಿಕ್ಷೆಯನ್ನು ವಿಧಿಸುವ ಕಾಲದಲ್ಲಿ, ಬಿಡುಗಡೆಯ ಅನಂತರ ಆ ಶಿಕ್ಷೆಯು ಮುಕ್ತಾಯವಾಗುವ ದಿನಾಂಕದಿಂದ ಐದು ವರ್ಷಗಳು ಮೀರದ ಅವಧಿಯವರೆಗೆ ಅವನ ವಾಸಸ್ಥಳ ಮತ್ತು ಅಂಥ ವಾಸಸ್ಥಳದ ಯಾವುದೇ ಬದಲಾವಣೆಯನ್ನು ಅಥವಾ ಅಲ್ಲಿಂದ ಗೈರುಹಾಜರಿಯನ್ನು 23ನೇ ಪ್ರಕರಣದ ಮೇರೆಗೆ ರಚಿತವಾದ ನಿಯಮಗಳಿಗನುಸಾರ ಅಧಿಸೂಚಿಸಬೇಕೆಂದೂ ಆದೇಶ ಮಾಡಬಹುದು.

(2) ಅಪೀಲಿನಲ್ಲಿ ಅಥವಾ ಬೇರೆ ರೀತಿಯಲ್ಲಿ ಅಂಥ ಅಪರಾಧ ನಿರ್ಣಯವು ರದ್ದಾದರೆ, ಅಂಥ ಆದೇಶವು ಶೂನ್ಯವಾಗತಕ್ಕದ್ದು.

(3) ಅಪೀಲು ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು ಸಹ ಅದರ ಪುನರೀಕ್ಷಣಾ ಅಧಿಕಾರಗಳನ್ನು ಚಲಾಯಿಸುವಾಗ, ಈ ಪ್ರಕರಣದ ಮೇರೆಗೆ ಆದೇಶವನ್ನು ಮಾಡಬಹುದು.

(4) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ನಿಯಮವನ್ನು ಉಲ್ಲಂಘಿಸಿದ ಬಗ್ಗೆ ಆಪಾದಿತನಾದ ಯಾರೇ ವ್ಯಕ್ತಿಯ ವಾಸಸ್ಥಳವೆಂದು ಕೊನೆಯದಾಗಿ ಅಧಿಸೂಚಿಸಿದ ಸ್ಥಳ ಇರುವ ಜಿಲ್ಲೆಯಲ್ಲಿ ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನು ಅವನನ್ನು ಅಧಿವಿಚಾರಣೆ ಮಾಡಬಹುದು.

[**12. ರೂಢಿಗತ ಅಪರಾಧಿಗಳಿಂದ ಸದ್ವರ್ತನೆಯ ಬಗ್ಗೆ ಭದ್ರತೆ.–** ಸ್ತ್ರೀಯರ ಮತ್ತು ಬಾಲಕಿಯರ ಅನೈತಿಕ ವ್ಯವಹಾರ ದಮನ (ತಿದ್ದುಪಡಿ) ಅಧಿನಿಯಮ, 1986ರ (1986ರ 44) 13ನೇ ಪ್ರಕರಣದ ಮೂಲಕ 26.1.1987 ರಿಂದ ಪರಿಣಮಿಸುವಂತೆ ನಿರಸನಗೊಳಿಸಲಾಗಿದೆ.]

**13. ವಿಶೇಷ ಪೊಲೀಸ್ ಅಧಿಕಾರಿ ಮತ್ತು ಸಲಹಾ ನಿಕಾಯ.–** (1) ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬೇಕಾದ ಪ್ರತಿಯೊಂದು ಪ್ರದೇಶಕ್ಕೆ, ಆ ಪ್ರದೇಶದಲ್ಲಿ ಈ ಅಧಿನಿಯಮದ ಮೇರೆಗಿನ ಅಪರಾಧಗಳ ಬಗ್ಗೆ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರವು ನೇಮಿಸಿದ ಅಥವಾ ಅದರ ಪರವಾಗಿ ನೇಮಕ ಮಾಡಲಾದ ಒಬ್ಬ ವಿಶೇಷ ಪೊಲೀಸ್ ಅಧಿಕಾರಿಯು ಇರತಕ್ಕದ್ದು.

(2) ಆ ವಿಶೇಷ ಪೊಲೀಸ್ ಅಧಿಕಾರಿಯು ಪೊಲೀಸ್ ಇನ್ಸ್‌ಪೆಕ್ಟರ್‌ನ ದರ್ಜೆಗಿಂತ ಕಡಿಮೆ ದರ್ಜೆಯವನಾಗಿರತಕ್ಕದ್ದಲ್ಲ.

(2ಎ) ಜಿಲ್ಲಾ ಮ್ಯಾಜಿಸ್ಟ್ರೇಟನು, ನಿರ್ದಿಷ್ಟ ಪ್ರಕರಣಗಳಿಗೆ ಅಥವಾ ಪ್ರಕರಣಗಳ ವರ್ಗಗಳಿಗೆ ಅಥವಾ ಸಾಮಾನ್ಯ ಪ್ರಕರಣಗಳಿಗೆ ಸಂಬಂಧಿಸಿ ವಿಶೇಷ ಪೊಲೀಸ್ ಅಧಿಕಾರಿಗೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದಾನ ಮಾಡಲಾಗಿರುವ ಎಲ್ಲ ಅಧಿಕಾರಗಳನ್ನು ಅಥವಾ ಅವುಗಳ ಪೈಕಿ ಯಾವುದೇ ಅಧಿಕಾರವನ್ನು ಯಾರೇ ನಿವೃತ್ತ ಪೊಲೀಸ್ ಅಥವಾ ಮಿಲಿಟರಿ ಅಧಿಕಾರಿಗೆ ಪ್ರದಾನ ಮಾಡುವುದು ಅವಶ್ಯ ಅಥವಾ ವಿಹಿತವಾಗಿದೆ ಎಂದು ಪರಿಗಣಿಸಿದರೆ ಅವನು ಹಾಗೆ ಮಾಡಬಹುದು:

ಪರಂತು, ಅಂಥ ಯಾವುದೇ ಅಧಿಕಾರವನ್ನು,-

(ಎ) ಅಂಥ ಪೊಲೀಸ್ ಅಧಿಕಾರಿಯು, ಅವನು ನಿವೃತ್ತಿ ಹೊಂದುವ ಸಮಯದಲ್ಲಿ ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಹುದ್ದೆಯನ್ನು ಹೊಂದಿದ್ದ ಹೊರತು, ಆ ನಿವೃತ್ತ ಪೊಲೀಸ್ ಅಧಿಕಾರಿಗೆ;

(ಬಿ) ಅಂಥ ಮಿಲಿಟರಿ ಅಧಿಕಾರಿಯು, ಅವನು ನಿವೃತ್ತಿ ಹೊಂದುವ ಸಮಯದಲ್ಲಿ ಕಮೀಷನ್ಡ್ ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಹುದ್ದೆಯನ್ನು ಹೊಂದಿದ್ದ ಹೊರತು, ಆ ನಿವೃತ್ತ ಮಿಲಿಟರಿ ಅಧಿಕಾರಿಗೆ

– ಪ್ರದಾನ ಮಾಡತಕ್ಕದ್ದಲ್ಲ.

(3) ಈ ಅಧಿನಿಯಮದ ಮೇರೆಗಿನ ಅಪರಾಧಗಳ ಸಂಬಂಧದಲ್ಲಿ ತನ್ನ ಪ್ರಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು,-

(ಎ) ಒಂದು ಪ್ರದೇಶದ ವಿಶೇಷ ಪೊಲೀಸ್ ಅಧಿಕಾರಿಗೆ, ರಾಜ್ಯ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ಅಧೀನ ಪೊಲೀಸ್ ಅಧಿಕಾರಿಗಳು (ಸಾಧ್ಯವಿರುವ ಕಡೆಗಳಲ್ಲಿ ಮಹಿಳಾ ಪೊಲೀಸ್ ಅಧಿಕಾರಿಗಳು ಸೇರಿ) ನೆರವು ನೀಡತಕ್ಕದ್ದು; ಮತ್ತು

(ಬಿ) ರಾಜ್ಯ ಸರ್ಕಾರವು, ಈ ಅಧಿನಿಯಮದ ಕಾರ್ಯನಿರ್ವಹಣೆಯ ಬಗ್ಗೆ ಉದ್ಭವಿಸುವ ಸಾರ್ವಜನಿಕ ಮಹತ್ವದ ಪ್ರಶ್ನೆಗಳ ಸಂಬಂಧದಲ್ಲಿ ವಿಶೇಷ ಪೊಲೀಸ್ ಅಧಿಕಾರಿಗೆ ಸಲಹೆ ನೀಡಲು ಐದು ಜನರನ್ನು ಮೀರದ ಆ ಪ್ರದೇಶದ ಪ್ರಮುಖ ಸಮಾಜ ಕಲ್ಯಾಣ ಕಾರ್ಯಕರ್ತರನ್ನು (ಸಾಧ್ಯವಿರುವ ಕಡೆಗಳಲ್ಲಿ ಸಮಾಜ ಕಲ್ಯಾಣ ಮಹಿಳಾ ಕಾರ್ಯಕರ್ತರೂ ಸೇರಿ) ಒಳಗೊಂಡ ಸರ್ಕಾರೇತರ ಸಲಹಾ ನಿಕಾಯವೊಂದನ್ನು ವಿಶೇಷ ಪೊಲೀಸ್ ಅಧಿಕಾರಿಯ ಜೊತೆಗೆ ಸಹವರ್ತಿಯಾಗಿ ಸೇರಿಸಬಹುದು.

(4) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ಅಥವಾ ವ್ಯಕ್ತಿಗಳ ಲೈಂಗಿಕ ಶೋಷಣೆಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗಿನ ಮತ್ತು ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಎಸಗಲಾಗಿರುವ ಯಾವುದೇ ಅಪರಾಧವನ್ನು ತನಿಖೆ ಮಾಡುವ ಉದ್ದೇಶಕ್ಕಾಗಿ ನಿರ್ದಿಷ್ಟ ಸಂಖ್ಯೆಯ ಪೊಲೀಸ್ ಅಧಿಕಾರಿಗಳನ್ನು ಟ್ರಾಫಿಕಿಂಗ್ ಪೊಲೀಸ್ ಅಧಿಕಾರಿಗಳನ್ನಾಗಿ ನೇಮಕ ಮಾಡಬಹುದು ಮತ್ತು ಅವರು, ಈ ಅಧಿನಿಯಮದ ಮೇರೆಗೆ ವಿಶೇಷ ಪೊಲೀಸ್ ಅಧಿಕಾರಿಗಳು ಚಲಾಯಿಸಬಹುದಾದ ಎಲ್ಲಾ ಅಧಿಕಾರಗಳನ್ನು ಮತ್ತು ನಿರ್ವಹಿಸಬಹುದಾದ ಎಲ್ಲ ಪ್ರಕಾರ್ಯಗಳನ್ನು, ಅವರು ಅಂಥ ಅಧಿಕಾರಗಳನ್ನು ಮತ್ತು ಅಂಥ ಪ್ರಕಾರ್ಯಗಳನ್ನು ಇಡೀ ಭಾರತಕ್ಕೆ ಸಂಬಂಧಪಟ್ಟಂತೆ ಚಲಾಯಿಸತಕ್ಕದ್ದೆಂಬ ಮತ್ತು ನಿರ್ವಹಿಸತಕ್ಕದ್ದೆಂಬ ಮಾರ್ಪಾಟಿನೊಂದಿಗೆ ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

**14. ಅಪರಾಧಗಳು ಸಂಜ್ಞೇಯವಾಗಿರುವುದು.**- ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು, ಆ ಸಂಹಿತೆಯ ಅರ್ಥವ್ಯಾಪ್ತಿಯೊಳಗೆ ಸಂಜ್ಞೇಯ ಅಪರಾಧವೆಂದು ಭಾವಿಸತಕ್ಕದ್ದು:

ಪರಂತು, ಆ ಸಂಹಿತೆಯಲ್ಲಿ ಏನೇ ಇದ್ದರೂ,-

(i) ವಾರಂಟಿಲ್ಲದೆ ದಸ್ತಗಿರಿಯನ್ನು ವಿಶೇಷ ಪೊಲೀಸ್ ಅಧಿಕಾರಿಯು ಅಥವಾ ಅವನ ನಿರ್ದೇಶನ ಅಥವಾ ಮಾರ್ಗದರ್ಶನದ ಮೇರೆಗೆ ಅಥವಾ ಅವನ ಪೂರ್ವಾನುಮೋದನೆಗೆ ಒಳಪಟ್ಟು ಮಾತ್ರ ಮಾಡಬಹುದು;

(ii) ವಿಶೇಷ ಪೊಲೀಸ್ ಅಧಿಕಾರಿಯು, ಈ ಅಧಿನಿಯಮದ ಮೇರೆಗಿನ ಅಪರಾಧದ ಬಗ್ಗೆ ಯಾರೇ ವ್ಯಕ್ತಿಯನ್ನು ತನ್ನ ಸಮಕ್ಷಮದಲ್ಲಿ ಅಲ್ಲದೆ ಅನ್ಯಥಾ ವಾರಂಟಿಲ್ಲದೆ ದಸ್ತಗಿರಿ ಮಾಡಬೇಕಾದ ವ್ಯಕ್ತಿಯನ್ನು ಮತ್ತು ಯಾವ ಅಪರಾಧಕ್ಕಾಗಿ ದಸ್ತಗಿರಿ ಮಾಡಲಾಗುತ್ತಿದೆ ಎಂಬುದನ್ನು ನಿರ್ದಿಷ್ಟಪಡಿಸಿ, ಲಿಖಿತ ಆದೇಶವನ್ನು ಆ ಅಧೀನ ಅಧಿಕಾರಿಗೆ ಕೊಡತಕ್ಕದ್ದು; ಮತ್ತು ಆ ಎರಡನೇ ಅಧಿಕಾರಿಯು ಆ ವ್ಯಕ್ತಿಯನ್ನು ದಸ್ತಗಿರಿ ಮಾಡುವುದಕ್ಕೆ ಮೊದಲು, ಆದೇಶದ ಸಾರಾಂಶವನ್ನು ಅವನಿಗೆ ತಿಳಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಆದೇಶವನ್ನು ತೋರಿಸುವಂತೆ ಅಪೇಕ್ಷಿಸಿದರೆ ಅವನಿಗೆ ಆ ಆದೇಶವನ್ನು ತೋರಿಸತಕ್ಕದ್ದು;

(iii) ವಿಶೇಷ ಪೊಲೀಸ್ ಅಧಿಕಾರಿಯಿಂದ ವಿಶೇಷವಾಗಿ ಅಧಿಕೃತನಾದ ಸಬ್ ಇನ್ಸ್‌ಪೆಕ್ಟರ್‌ನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಯು, ವಿಶೇಷ ಪೊಲೀಸ್ ಅಧಿಕಾರಿಯ ಆದೇಶವನ್ನು ಪಡೆಯುವಲ್ಲಿ ಉಂಟಾಗುವ ವಿಳಂಬದ ಕಾರಣದಿಂದಾಗಿ ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕೆ ಸಂಬಂಧಿಸಿದ ಯಾವುದೇ ಮಹತ್ವಪೂರ್ಣ ಸಾಕ್ಷ್ಯವನ್ನು ನಾಶಪಡಿಸುವ ಅಥವಾ ಬಚ್ಚಿಡುವ ಸಂಭವವಿದೆಯೆಂದು ಅಥವಾ ಅಪರಾಧವನ್ನು ಮಾಡಿದ ಅಥವಾ ಮಾಡಿರುವನೆಂದು ಶಂಕಿಸಲಾದ ವ್ಯಕ್ತಿಯು ತಪ್ಪಿಸಿಕೊಂಡು ಹೋಗುವ ಸಂಭವವಿದೆ ಎಂದು ನಂಬಲು ಅವನಿಗೆ ಕಾರಣವಿದ್ದರೆ ಅಥವಾ ಅಂಥ ವ್ಯಕ್ತಿಯ ಹೆಸರು ಮತ್ತು ವಿಳಾಸವು ಗೊತ್ತಿಲ್ಲದಿದ್ದರೆ ಅಥವಾ ಸುಳ್ಳು ಹೆಸರನ್ನು ಅಥವಾ ವಿಳಾಸವನ್ನು ಕೊಟ್ಟಿದ್ದಾನೆಂದು ಶಂಕಿಸಲು ಕಾರಣವಿದ್ದರೆ, ಸಂಬಂಧಪಟ್ಟ ವ್ಯಕ್ತಿಯನ್ನು ಅಂಥ ಆದೇಶವಿಲ್ಲದೆ ದಸ್ತಗಿರಿ ಮಾಡಬಹುದು. ಆದರೆ, ಹಾಗೆ ಮಾಡಿದ ಸಂದರ್ಭದಲ್ಲಿ ಅವನು ಸಾಧ್ಯವಾದಷ್ಟು ಬೇಗನೆ ದಸ್ತಗಿರಿಯ ಬಗ್ಗೆ ಮತ್ತು ದಸ್ತಗಿರಿ ಮಾಡಲಾದ ಪರಿಸ್ಥಿತಿಗಳ ಬಗ್ಗೆ ವಿಶೇಷ ಪೊಲೀಸ್ ಅಧಿಕಾರಿಗೆ ವರದಿ ಮಾಡತಕ್ಕದ್ದು.

**15. ವಾರಂಟಿಲ್ಲದೆ ಶೋಧನೆ.**- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನು ಯಾವುದೇ ಆವರಣದಲ್ಲಿ ವಾಸಿಸುವ ವ್ಯಕ್ತಿಯ ಸಂಬಂಧದಲ್ಲಿ ಮಾಡಲಾಗಿದೆಯೆಂದು ಅಥವಾ ಮಾಡಲಾಗುತ್ತಿದೆ ಎಂದು ಮತ್ತು ವಾರಂಟು ಪಡೆದು ಆ ಆವರಣದ ಶೋಧನೆಯನ್ನು ಅನಗತ್ಯ ವಿಳಂಬವಿಲ್ಲದೆ ಮಾಡಲು ಸಾಧ್ಯವಾಗದೆಂದು ಸಂದರ್ಭಾನುಸಾರ ವಿಶೇಷ ಪೊಲೀಸ್ ಅಧಿಕಾರಿಗೆ ಅಥವಾ ಟ್ರಾಫಿಕಿಂಗ್ ಪೊಲೀಸ್ ಅಧಿಕಾರಿಗೆ ನಂಬಲು ಯುಕ್ತ ಆಧಾರಗಳಿದ್ದಾಗ, ಅಂಥ ಅಧಿಕಾರಿಯು ತನ್ನ ನಂಬಿಕೆಗೆ ಇರುವ ಆಧಾರಗಳನ್ನು ಅಭಿಲೇಖಿಸಿದ ತರುವಾಯ, ವಾರಂಟಿಲ್ಲದೆ ಅಂಥ ಆವರಣವನ್ನು ಪ್ರವೇಶಿಸಬಹುದು ಮತ್ತು ಶೋಧನೆ ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಶೋಧನೆ ನಡೆಸುವುದಕ್ಕೆ ಮೊದಲು ಸಂದರ್ಭಾನುಸಾರ, ವಿಶೇಷ ಪೊಲೀಸ್ ಅಧಿಕಾರಿಯು ಅಥವಾ ಟ್ರಾಫಿಕಿಂಗ್ ಪೊಲೀಸ್ ಅಧಿಕಾರಿಯು, ಯಾವ ಸ್ಥಳದ ಶೋಧನೆ ಮಾಡಬೇಕಾಗಿದೆಯೋ ಆ ಸ್ಥಳದ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಗಣ್ಯ ನಿವಾಸಿಗಳನ್ನು (ಅವರಲ್ಲಿ ಕೊನೇ ಪಕ್ಷ ಒಬ್ಬ ಮಹಿಳೆ ಇರತಕ್ಕದ್ದು) ಶೋಧನೆಯ ಸಮಯದಲ್ಲಿ ಹಾಜರಿದ್ದು, ಸಾಕ್ಷಿಯಾಗಿರಲು ಕೇಳತಕ್ಕದ್ದು ಮತ್ತು ಹಾಗೆ ಮಾಡಲು ಅವರಿಗೆ ಅಥವಾ ಅವರ ಪೈಕಿ ಯಾರಿಗಾದರೂ ಲಿಖಿತ ಆದೇಶವನ್ನು ನೀಡಬಹುದು:

ಪರಂತು, ಶೋಧನೆ ಮಾಡಬೇಕಾದ ಸ್ಥಳವು ಯಾವ ಪ್ರದೇಶದಲ್ಲಿರುವುದೋ ಆ ಪ್ರದೇಶದ ಗಣ್ಯ ನಿವಾಸಿಗಳಿಗೆ ಸಂಬಂಧಿಸಿದ ಅಗತ್ಯತೆಯು, ಹಾಜರಿದ್ದು ಶೋಧನೆಗೆ ಸಾಕ್ಷಿಯಾಗಿರಲು ಕೇಳಿಕೊಂಡ ಮಹಿಳೆಗೆ ಅನ್ವಯಿಸತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗಿನ ಶೋಧನೆಯಲ್ಲಿ ಹಾಜರಿರಬೇಕೆಂದು ಮತ್ತು ಸಾಕ್ಷಿಯಾಗಿರಬೇಕೆಂದು ಕೊಟ್ಟ ಅಥವಾ ನೀಡಿದ ಲಿಖಿತ ಆದೇಶದ ಮೂಲಕ ಯಾರೇ ವ್ಯಕ್ತಿಯನ್ನು ಕೇಳಿದಾಗ, ಅವನು ಹಾಗೆ ಮಾಡಲು ಯುಕ್ತ ಕಾರಣವಿಲ್ಲದೆ ನಿರಾಕರಿಸಿದರೆ ಅಥವಾ ನಿರ್ಲಕ್ಷಿಸಿದರೆ, ಅವನು ಭಾರತ ದಂಡ ಸಂಹಿತೆಯ (1860ರ 45) 187ನೇ ಪ್ರಕರಣದ ಮೇರೆಗೆ ಅಪರಾಧ ಮಾಡಿರುವುದಾಗಿ ಭಾವಿಸತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಆವರಣವನ್ನು ಪ್ರವೇಶಿಸುವ, ಸಂದರ್ಭಾನುಸಾರ, ವಿಶೇಷ ಪೊಲೀಸ್ ಅಧಿಕಾರಿಯು ಅಥವಾ ಟ್ರಾಫಿಕಿಂಗ್ ಪೊಲೀಸ್ ಅಧಿಕಾರಿಯು ಅಲ್ಲಿ ಕಂಡುಬಂದ ಎಲ್ಲ ವ್ಯಕ್ತಿಗಳನ್ನು ಅಲ್ಲಿಂದ ಸ್ಥಳಾಂತರಿಸಲು ಹಕ್ಕುಳ್ಳವನಾಗಿರತಕ್ಕದ್ದು.

(5) ಸಂದರ್ಭಾನುಸಾರ, ವಿಶೇಷ ಪೊಲೀಸ್ ಅಧಿಕಾರಿಯು ಅಥವಾ ಟ್ರಾಫಿಕಿಂಗ್ ಪೊಲೀಸ್ ಅಧಿಕಾರಿಯು (4)ನೇ ಉಪಪ್ರಕರಣದ ಮೇರೆಗೆ ವ್ಯಕ್ತಿಯನ್ನು ಸ್ಥಳಾಂತರಿಸಿದ ತರುವಾಯ, ತಕ್ಷಣ ಅವನನ್ನು ಸಮುಚಿತ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸತಕ್ಕದ್ದು.

(5ಎ) (5)ನೇ ಉಪಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಿದ ಯಾರೇ ವ್ಯಕ್ತಿಯ ವಯಸ್ಸನ್ನು ನಿರ್ಧರಿಸುವ ಉದ್ದೇಶಗಳಿಗಾಗಿ ಅಥವಾ ಲೈಂಗಿಕ ದುರುಪಯೋಗದ ಪರಿಣಾಮವಾಗಿ ಆದ ಯಾವುದೇ ಗಾಯಗಳನ್ನು ಪತ್ತೆ ಹಚ್ಚುವುದಕ್ಕಾಗಿ ಅಥವಾ ಲೈಂಗಿಕವಾಗಿ ವರ್ಗಾವಣೆಯಾದ ಯಾವುದೇ ರೋಗಗಳು ಇವೆಯೇ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ನೋಂದಾಯಿತ ವೈದ್ಯಕೀಯ ವೃತ್ತಿಗನು ವ್ಯಕ್ತಿಯನ್ನು ಪರೀಕ್ಷಿಸತಕ್ಕದ್ದು.

**ವಿವರಣೆ.-** ಈ ಉಪಪ್ರಕರಣದಲ್ಲಿ "ನೋಂದಾಯಿತ ವೈದ್ಯಕೀಯ ವೃತ್ತಿಗ" ಎಂಬ ಪದವು ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 (1956ರ 102) ರಲ್ಲಿರುವ ಅರ್ಥವನ್ನು ಹೊಂದಿರುತ್ತದೆ.

(6) ಸಂದರ್ಭಾನುಸಾರ, ವಿಶೇಷ ಪೊಲೀಸ್ ಅಧಿಕಾರಿಯು ಅಥವಾ ಟ್ರಾಫಿಕಿಂಗ್ ಪೊಲೀಸ್ ಅಧಿಕಾರಿಯು ಮತ್ತು ಶೋಧನೆಯಲ್ಲಿ ಭಾಗವಹಿಸುವ ಅಥವಾ ಹಾಜರಿರುವ ಮತ್ತು ಸಾಕ್ಷಿಯಾಗಿರುವ ಇತರ ವ್ಯಕ್ತಿಗಳು, ಶೋಧನೆಯ ಸಂಬಂಧದಲ್ಲಿ ಅಥವಾ ಶೋಧನೆಯ ಉದ್ದೇಶಕ್ಕಾಗಿ ಕಾನೂನುಬದ್ಧವಾಗಿ ಕೈಗೊಂಡ ಯಾವುದೇ ಕೃತ್ಯದ ಬಗ್ಗೆ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗಳಿಗೆ ಗುರಿಯಾಗತಕ್ಕದ್ದಲ್ಲ.

(6ಎ) ಈ ಪ್ರಕರಣದ ಮೇರೆಗೆ ಶೋಧನೆ ನಡೆಸುವ ವಿಶೇಷ ಪೊಲೀಸ್ ಅಧಿಕಾರಿಯ ಅಥವಾ ಸಂದರ್ಭಾನುಸಾರ ಟ್ರಾಫಿಕಿಂಗ್ ಪೊಲೀಸ್ ಅಧಿಕಾರಿಯ ಜೊತೆ ಕೊನೆಯ ಪಕ್ಷ ಇಬ್ಬರು ಮಹಿಳಾ ಪೊಲೀಸ್ ಅಧಿಕಾರಿಗಳು ಇರತಕ್ಕದ್ದು ಮತ್ತು (4)ನೇ ಉಪಪ್ರಕರಣದ ಮೇರೆಗೆ ಸ್ಥಳಾಂತರಿಸಿದ ಯಾರೇ ಮಹಿಳೆ ಅಥವಾ ಬಾಲಕಿಯನ್ನು ಪ್ರಶ್ನಿಸಬೇಕಾಗಿರುವಲ್ಲಿ ಮಹಿಳಾ ಪೊಲೀಸ್ ಅಧಿಕಾರಿಯು ಪ್ರಶ್ನಿಸತಕ್ಕದ್ದು ಮತ್ತು ಯಾರೇ ಮಹಿಳಾ ಪೊಲೀಸ್ ಅಧಿಕಾರಿಯು ಲಭ್ಯವಿಲ್ಲದಿದ್ದರೆ ಮನ್ನಣೆ ಪಡೆದ ಕಲ್ಯಾಣ ಸಂಸ್ಥೆ ಅಥವಾ ಸಂಘಟನೆಯ ಮಹಿಳಾ ಸದಸ್ಯರ ಸಮ್ಮುಖದಲ್ಲಿ ಮಾತ್ರ ಪ್ರಶ್ನಿಸತಕ್ಕದ್ದು.

**ವಿವರಣೆ.-** ಈ ಉಪಪ್ರಕರಣ ಮತ್ತು 17ಎ ಪ್ರಕರಣದ ಉದ್ದೇಶಗಳಿಗಾಗಿ "ಮನ್ನಣೆ ಪಡೆದ ಕಲ್ಯಾಣ ಸಂಸ್ಥೆ ಅಥವಾ ಸಂಘಟನೆ" ಎಂದರೆ ರಾಜ್ಯ ಸರ್ಕಾರವು ಈ ಬಗ್ಗೆ ಮನ್ನಣೆ ನೀಡಬಹುದಾದಂಥ ಸಂಸ್ಥೆ ಅಥವಾ ಸಂಘಟನೆ.

(7) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳನ್ನು ಅವು ಸದರಿ ಸಂಹಿತೆಯ 94ನೇ ಪ್ರಕರಣದ ಮೇರೆಗೆ ಹೊರಡಿಸಲಾದ ವಾರಂಟಿನ ಪ್ರಾಧಿಕಾರದ ಮೇರೆಗೆ ಮಾಡಲಾಗುವ ಯಾವುದೇ ಶೋಧನೆಗೆ ಅನ್ವಯವಾಗುವಂತೆಯೇ ಈ ಪ್ರಕರಣದ ಮೇರೆಗೆ ಮಾಡುವ ಯಾವುದೇ ಶೋಧನೆಗೆ ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಅನ್ವಯವಾಗತಕ್ಕದ್ದು.

**16. ವ್ಯಕ್ತಿಯನ್ನು ರಕ್ಷಿಸುವುದು.-** (1) ಪೊಲೀಸರಿಂದ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಇತರ ವ್ಯಕ್ತಿಯಿಂದ ಅಥವಾ ಇತರ ರೀತಿಯಲ್ಲಿ ಸ್ವೀಕರಿಸಿದ ಮಾಹಿತಿಯಲ್ಲಿ ಯಾರೇ ವ್ಯಕ್ತಿಯು ವೇಶ್ಯಾಗೃಹದಲ್ಲಿ ವಾಸಿಸುತ್ತಿರುವನೆಂದು ಅಥವಾ ವೇಶ್ಯಾವೃತ್ತಿಯನ್ನು ನಡೆಸುತ್ತಿರುವನೆಂದು ಅಥವಾ ಅವನನ್ನು ವೇಶ್ಯಾವೃತ್ತಿ ನಡೆಸುವಂತೆ ಮಾಡಲಾಗುತ್ತಿದೆಯೆಂದು ಮ್ಯಾಜಿಸ್ಟ್ರೇಟನಿಗೆ ನಂಬಲು ಕಾರಣವಿದ್ದಲ್ಲಿ, ಅಂಥ ವೇಶ್ಯಾಗೃಹವನ್ನು ಪ್ರವೇಶಿಸಲು ಮತ್ತು ಅಂಥ ವ್ಯಕ್ತಿಯನ್ನು ಅಲ್ಲಿಂದ ಸ್ಥಳಾಂತರಿಸಲು ಮತ್ತು ಅವನನ್ನು ತನ್ನ ಮುಂದೆ ಹಾಜರುಪಡಿಸಲು ಸಬ್‌ಇನ್ಸ್‌ಪೆಕ್ಟರನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಪೊಲೀಸ್ ಅಧಿಕಾರಿಗೆ ಅವನು ನಿರ್ದೇಶಿಸಬಹುದು.

(2) ಆ ವ್ಯಕ್ತಿಯನ್ನು ಸ್ಥಳಾಂತರಿಸಿದ ತರುವಾಯ ಪೊಲೀಸ್ ಅಧಿಕಾರಿಯು, ಆದೇಶವನ್ನು ಹೊರಡಿಸುವ ಮ್ಯಾಜಿಸ್ಟ್ರೇಟನ ಮುಂದೆ ಅವನನ್ನು ಕೂಡಲೇ ಹಾಜರುಪಡಿಸತಕ್ಕದ್ದು.

**17. 15ನೇ ಪ್ರಕರಣದ ಮೇರೆಗೆ ಸ್ಥಳಾಂತರಿಸಲಾದ ಅಥವಾ 16ನೇ ಪ್ರಕರಣದ ಮೇರೆಗೆ ರಕ್ಷಿಸಲಾದ ವ್ಯಕ್ತಿಗಳ ಮಧ್ಯಕಾಲೀನ ಅಭಿರಕ್ಷೆ.-** (1) 15ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಯನ್ನು ಸ್ಥಳಾಂತರಿಸುವ ವಿಶೇಷ ಪೊಲೀಸ್ ಅಧಿಕಾರಿಗೆ ಅಥವಾ 16ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಯನ್ನು ರಕ್ಷಿಸುವ ಪೊಲೀಸ್ ಅಧಿಕಾರಿಗೆ, 15ನೇ ಪ್ರಕರಣದ (5)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಲಾಗಿರುವಂತೆ ಸಮುಚಿತ ಮ್ಯಾಜಿಸ್ಟ್ರೇಟನ ಮುಂದೆ, ಅಥವಾ 16ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಹೊರಡಿಸುವ ಮ್ಯಾಜಿಸ್ಟ್ರೇಟನ ಮುಂದೆ ಆ ವ್ಯಕ್ತಿಯನ್ನು ಯಾವುದೇ ಕಾರಣಕ್ಕಾಗಿ ಹಾಜರುಪಡಿಸಲು ಸಾಧ್ಯವಾಗದಿದ್ದರೆ, ಅವನು ಆ ಕೂಡಲೇ ಅತ್ಯಂತ ಸಮೀಪದ ಯಾವುದೇ ವರ್ಗದ ಮ್ಯಾಜಿಸ್ಟ್ರೇಟನ ಮುಂದೆ ಆ ವ್ಯಕ್ತಿಯನ್ನು ಹಾಜರುಪಡಿಸತಕ್ಕದ್ದು ಮತ್ತು ಅಂಥ ಮ್ಯಾಜಿಸ್ಟ್ರೇಟನು, ಆ ವ್ಯಕ್ತಿಯನ್ನು

ಸಮುಚಿತ ಮ್ಯಾಜಿಸ್ಟ್ರೇಟನ ಮುಂದೆ ಅಥವಾ ಸಂದರ್ಭಾನುಸಾರ ಆದೇಶವನ್ನು ಹೊರಡಿಸುವ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸುವವರೆಗೆ ಅವನ ಸುರಕ್ಷಿತ ಅಭಿರಕ್ಷೆಗಾಗಿ ತಾನು ಯುಕ್ತವೆಂದು ಭಾವಿಸುವಂಥ ಆದೇಶಗಳನ್ನು ಹೊರಡಿಸತಕ್ಕದ್ದು:

ಪರಂತು, ಯಾರೇ ವ್ಯಕ್ತಿಯನ್ನು,-

(i) ಈ ಉಪಪ್ರಕರಣದ ಮೇರೆಗೆ ಮಾಡಿದ ಆದೇಶದ ದಿನಾಂಕದಿಂದ ಹತ್ತು ದಿನಗಳನ್ನು ಮೀರುವ ಅವಧಿಯವರೆಗೆ ಈ ಉಪಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿ ತಡೆಹಿಡಿದಿಡತಕ್ಕದ್ದಲ್ಲ; ಅಥವಾ

(ii) ಅವನ ಮೇಲೆ ಹಾನಿಕರ ಪ್ರಭಾವ ಬೀರುವ ವ್ಯಕ್ತಿಗೆ ಅವನನ್ನು ವಾಪಸ್ಸು ನೀಡತಕ್ಕದ್ದಲ್ಲ ಅಥವಾ ಅವನ ಅಭಿರಕ್ಷೆಯಲ್ಲಿ ಇರಿಸತಕ್ಕದ್ದಲ್ಲ.

(2) 15ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಸಮುಚಿತ ಮ್ಯಾಜಿಸ್ಟ್ರೇಟನ ಮುಂದೆ ಅಥವಾ 16ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನ ಮುಂದೆ ವ್ಯಕ್ತಿಯನ್ನು ಹಾಜರುಪಡಿಸಿದಾಗ, ಆ ಮ್ಯಾಜಿಸ್ಟ್ರೇಟನು ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟ ತರುವಾಯ, 16ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ವೀಕರಿಸಿದ ಮಾಹಿತಿಯು ಸರಿಯಾಗಿರುವ ಬಗ್ಗೆ ಮತ್ತು ಆ ವ್ಯಕ್ತಿಯ ವಯಸ್ಸು, ಚಾರಿತ್ರ್ಯ ಮತ್ತು ಪೂರ್ವ ವೃತ್ತಾಂತದ ಬಗ್ಗೆ ಮತ್ತು ಅವನ ಆರೈಕೆಯನ್ನು ನೋಡಿಕೊಳ್ಳುವ ಅವನ/ಅವಳ ತಂದೆ-ತಾಯಿ, ಪಾಲಕ ಅಥವಾ ಪತಿ ಇವರ ಅರ್ಹತೆಯ ಬಗ್ಗೆ ಮತ್ತು ಅವನನ್ನು ಮನೆಗೆ ಕಳುಹಿಸಿದರೆ, ಅವನ ಮೇಲೆ ಪ್ರಭಾವ ಬೀರುವ ಅವನ ಮನೆಯ ಪರಿಸ್ಥಿತಿಗಳ ಸ್ವರೂಪದ ಬಗ್ಗೆ ವಿಚಾರಣೆ ಮಾಡಿಸತಕ್ಕದ್ದು, ಮತ್ತು ಈ ಉದ್ದೇಶಕ್ಕಾಗಿ, ಅವನು ಮೇಲಿನ ಪರಿಸ್ಥಿತಿಗಳ ಬಗ್ಗೆ ಆ ವ್ಯಕ್ತಿಯ ವ್ಯಕ್ತಿತ್ವ ಮತ್ತು ಅವನ ಪುನರ್ವಸತಿಯ ಮುಂದಿನ ಪರಿಣಾಮಗಳನ್ನು ಕುರಿತು ವಿಚಾರಣೆ ನಡೆಸಲು ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958ರ (1958ರ 20) ಮೇರೆಗೆ ನೇಮಕ ಮಾಡಲಾದ ಪರಿವೀಕ್ಷಣಾಧಿಕಾರಿಗೆ ನಿರ್ದೇಶಿಸಬಹುದು.

(3) ಮ್ಯಾಜಿಸ್ಟ್ರೇಟನು, (2)ನೇ ಉಪಪ್ರಕರಣದ ಮೇರೆಗೆ ಒಂದು ಪ್ರಕರಣದ ಬಗ್ಗೆ ವಿಚಾರಣೆ ನಡೆಸುವಾಗ, ಆ ವ್ಯಕ್ತಿಯ ಸುರಕ್ಷಿತ ಅಭಿರಕ್ಷೆಗಾಗಿ, ತಾನು ಸಮುಚಿತವೆಂದು ಭಾವಿಸುವಂಥ ಆದೇಶಗಳನ್ನು ಹೊರಡಿಸಬಹುದು:

ಪರಂತು, 16ನೇ ಪ್ರಕರಣದ ಮೇರೆಗೆ ರಕ್ಷಿಸಲಾದ ವ್ಯಕ್ತಿಯು ಮಗು ಅಥವಾ ಅಪ್ರಾಪ್ತ ವಯಸ್ಕನಾಗಿರುವಲ್ಲಿ, ಅಂಥ ಮಗು ಅಥವಾ ಅಪ್ರಾಪ್ತ ವಯಸ್ಕನನ್ನು ಯಾವುದೇ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಮಕ್ಕಳ ಅಧಿನಿಯಮದ ಮೇರೆಗೆ ಮಕ್ಕಳ ಸುರಕ್ಷಿತ ಅಭಿರಕ್ಷೆಗಾಗಿ ಸ್ಥಾಪಿತವಾದ ಅಥವಾ ಮನ್ನಣೆ ಪಡೆದ ಯಾವುದೇ ಸಂಸ್ಥೆಯಲ್ಲಿ ಇಡಲು ಮ್ಯಾಜಿಸ್ಟ್ರೇಟನಿಗೆ ಅವಕಾಶವಿರತಕ್ಕದ್ದು:

ಮತ್ತೂ ಪರಂತು, ಈ ಉದ್ದೇಶಕ್ಕಾಗಿ ಯಾರೇ ವ್ಯಕ್ತಿಯನ್ನು ಅಂಥ ಆದೇಶದ ದಿನಾಂಕದಿಂದ ಮೂರು ವಾರಗಳನ್ನು ಮೀರುವಷ್ಟು ಅವಧಿಯವರೆಗೆ ಅಭಿರಕ್ಷೆಯಲ್ಲಿಟ್ಟುಕೊಳ್ಳತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯನ್ನು, ಅವನ ಮೇಲೆ ಹಾನಿಕರ ಪ್ರಭಾವ ಬೀರುವ ಸಂಭವವಿರುವ ವ್ಯಕ್ತಿಯ ಅಭಿರಕ್ಷೆಯಲ್ಲಿ ಇಡತಕ್ಕದ್ದಲ್ಲ.

(4) (2)ನೇ ಉಪಪ್ರಕರಣದ ಮೇರೆಗೆ ಅಗತ್ಯವಾದ ವಿಚಾರಣೆಯನ್ನು ನಡೆಸಿದ ತರುವಾಯ,-

(ಎ) ಸ್ವೀಕರಿಸಿದ ಮಾಹಿತಿಯು ಸರಿಯಾಗಿದೆ ಎಂದು, ಮತ್ತು

(ಬಿ) ಅವನಿಗೆ ಆರೈಕೆ ಮತ್ತು ರಕ್ಷಣೆಯ ಅಗತ್ಯವಿದೆ ಎಂದು

- ಮ್ಯಾಜಿಸ್ಟ್ರೇಟನಿಗೆ ಮನದಟ್ಟಾಗಿರುವಲ್ಲಿ, ಅವನು (5)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಅಂಥ ವ್ಯಕ್ತಿಯನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ ಮತ್ತು ಮೂರು ವರ್ಷಗಳನ್ನು ಮೀರದಂಥ ಅವಧಿಯವರೆಗೆ ಸಂರಕ್ಷಣಾ ಗೃಹ ಅಥವಾ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ತಾನು ಸೂಕ್ತವೆಂದು ಪರಿಗಣಿಸಬಹುದಾದಂಥ ಇತರ ಅಭಿರಕ್ಷೆಯಲ್ಲಿ ಇರಿಸತಕ್ಕದ್ದೆಂದು ಆದೇಶವನ್ನು ಮಾಡಬಹುದು:

ಪರಂತು, ಅಂಥ ಅಭಿರಕ್ಷೆಯು, ಆ ವ್ಯಕ್ತಿಗಿಂತ ಭಿನ್ನವಾದ ಧಾರ್ಮಿಕ ಒಲವುಳ್ಳ ವ್ಯಕ್ತಿಯ ಅಥವಾ ವ್ಯಕ್ತಿಗಳ ನಿಕಾಯದ ಅಭಿರಕ್ಷೆಯಾಗಿರತಕ್ಕದ್ದಲ್ಲ ಮತ್ತು ಸಂರಕ್ಷಾ ಗೃಹದ ಪ್ರಭಾರದಲ್ಲಿರುವ ವ್ಯಕ್ತಿಗಳೂ ಸೇರಿದಂತೆ ಯಾವ ವ್ಯಕ್ತಿಗೆ ಆ ವ್ಯಕ್ತಿಯ ಅಭಿರಕ್ಷೆಯನ್ನು ವಹಿಸಿಕೊಡಲಾಗಿದೆಯೋ ಆ ವ್ಯಕ್ತಿಯು, ಅವಶ್ಯವಿರುವಲ್ಲಿ ಮತ್ತು ಸಾಧ್ಯವಿರುವಲ್ಲಿ ಆ ವ್ಯಕ್ತಿಯ ಸೂಕ್ತ ಆರೈಕೆ, ಪೋಷಣೆ, ಶಿಕ್ಷಣ, ತರಬೇತಿ ಮತ್ತು ವೈದ್ಯಕೀಯ ಮತ್ತು ಮಾನಸಿಕ

ಚಿಕಿತ್ಸೆಗೆ, ನ್ಯಾಯಾಲಯವು ನೇಮಕ ಮಾಡಿದ ವ್ಯಕ್ತಿಯ ಮೇಲ್ವಿಚಾರಣೆಗೆ ಸಂಬಂಧಿಸಿದ ನಿರ್ದೇಶನಗಳ ಆಧಾರದ ಮೇಲೆ ಕೈಗೊಳ್ಳಬೇಕಾದ ವಚನಬಂಧಗಳನ್ನು ಒಳಗೊಳ್ಳಬಹುದಾದ ಬಂಧಪತ್ರವನ್ನು ಬರೆದು ಕೊಡುವಂತೆ ಅಗತ್ಯಪಡಿಸಬಹುದು ಮತ್ತು ಆ ವಚನಬಂಧವು ಮೂರು ವರ್ಷಗಳನ್ನು ಮೀರದ ಅವಧಿಗೆ ಜಾರಿಯಲ್ಲಿರತಕ್ಕದ್ದು.

(5) ಮ್ಯಾಜಿಸ್ಟ್ರೇಟನು, (2)ನೇ ಉಪಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ತನಗೆ ನೆರವು ನೀಡಲು, ಐವರು ಗಣ್ಯ ವ್ಯಕ್ತಿಗಳನ್ನು ಸಮನು ಮಾಡಬಹುದು, ಮತ್ತು ಸಾಧ್ಯವಿರುವಲ್ಲೆಲ್ಲಾ ಅವರ ಪೈಕಿ ಮೂವರು ಮಹಿಳೆಯರಾಗಿರತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಅನುಭವಸ್ಥರಾದ ಸಮಾಜ ಕಲ್ಯಾಣ ಕಾರ್ಯಕರ್ತರ, ಅದರಲ್ಲೂ ವಿಶೇಷವಾಗಿ ಅನೈತಿಕ ವ್ಯವಹಾರವನ್ನು ದಮನಗೊಳಿಸುವ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಮಹಿಳಾ ಕಾರ್ಯಕರ್ತೆಯರ ಒಂದು ಪಟ್ಟಿಯನ್ನು ಇಟ್ಟುಕೊಂಡಿರಬಹುದು.

(6) (4)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಆದೇಶದ ವಿರುದ್ಧ ಸೆಷನ್ಸ್ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು ಮತ್ತು ಅಂಥ ಅಪೀಲಿನ ಮೇಲಣ ಆ ನ್ಯಾಯಾಲಯದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**17ಎ. 16ನೇ ಪ್ರಕರಣದ ಮೇರೆಗೆ ರಕ್ಷಿಸಲಾದ ವ್ಯಕ್ತಿಗಳನ್ನು ಅವರ ತಂದೆತಾಯಿ ಅಥವಾ ಪೋಷಕರಿಗೆ ಒಪ್ಪಿಸುವುದಕ್ಕೆ ಮೊದಲು ಪಾಲಿಸಬೇಕಾದ ಷರತ್ತುಗಳು.**– 17ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, 17ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸುವ ಮ್ಯಾಜಿಸ್ಟ್ರೇಟನು, 16ನೇ ಪ್ರಕರಣದ ಮೇರೆಗೆ ರಕ್ಷಿಸಲಾದ ಯಾರೇ ವ್ಯಕ್ತಿಯನ್ನು ಆ ವ್ಯಕ್ತಿಯ ತಂದೆತಾಯಿ, ಪೋಷಕ ಅಥವಾ ಗಂಡನಿಗೆ ಒಪ್ಪಿಸುವ ಆದೇಶವನ್ನು ಹೊರಡಿಸುವುದಕ್ಕೆ ಮೊದಲು, ಅಂಥ ವ್ಯಕ್ತಿಯನ್ನು ಇಟ್ಟುಕೊಳ್ಳುವ ಬಗ್ಗೆ ಆ ತಂದೆತಾಯಿ, ಪೋಷಕ ಅಥವಾ ಗಂಡನಿಗೆ ಇರುವ ಸಾಮರ್ಥ್ಯ ಅಥವಾ ಅವರ ನೈಜತೆಯ ಬಗ್ಗೆ ಮನ್ನಣೆ ಪಡೆದ ಕಲ್ಯಾಣ ಸಂಸ್ಥೆ ಅಥವಾ ಸಂಘಟನೆಯಿಂದ ತನಿಖೆ ಮಾಡಿಸುವ ಮೂಲಕ ಸ್ವತಃ ಮನದಟ್ಟು ಮಾಡಿಕೊಳ್ಳತಕ್ಕದ್ದು.

**18. ವೇಶ್ಯಾಗೃಹಗಳನ್ನು ಮುಚ್ಚುವುದು ಮತ್ತು ಆ ಆವರಣದಿಂದ ಅಪರಾಧಿಗಳನ್ನು ಹೊರದೂಡುವುದು.**– (1) 7ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಸಾರ್ವಜನಿಕ ಸ್ಥಳದಿಂದ ಇನ್ನೂರು ಮೀಟರುಗಳ ಅಂತರದೊಳಗೆ ಇರುವ ಯಾವುದೇ ಮನೆ, ಕೊಠಡಿ, ಸ್ಥಳ ಅಥವಾ ಅದರ ಯಾವುದೇ ಭಾಗದಲ್ಲಿ ಯಾರೇ ವ್ಯಕ್ತಿ ವೇಶ್ಯಾಗೃಹವನ್ನು ನಡೆಸುತ್ತಿರುವನೆಂದು ಅಥವಾ ವೇಶ್ಯಾಗೃಹವಾಗಿ ಉಪಯೋಗಿಸುತ್ತಿರುವನೆಂದು ಅಥವಾ ವೇಶ್ಯೆಯರು ಅವರ ವೃತ್ತಿಯನ್ನು ನಡೆಸಲು ಉಪಯೋಗಿಸುತ್ತಿರುವರೆಂದು ಪೊಲೀಸರಿಂದ ಅಥವಾ ಬೇರೆ ರೀತಿಯಲ್ಲಿ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ಮ್ಯಾಜಿಸ್ಟ್ರೇಟನು, ಅಂಥ ಮನೆಯ, ಕೊಠಡಿಯ, ಸ್ಥಳದ ಅಥವಾ ಅದರ ಭಾಗದ ಒಡೆಯನಿಗೆ, ಗುತ್ತಿಗೆಗೆ ಕೊಟ್ಟವನಿಗೆ ಅಥವಾ ಮಾಲೀಕನಿಗೆ ಅಥವಾ ಆ ಒಡೆಯನ, ಗುತ್ತಿಗೆಗೆ ಕೊಟ್ಟವನ ಅಥವಾ ಮಾಲೀಕನ ಏಜೆಂಟನಿಗೆ ಅಥವಾ ಅಂಥ ಮನೆಯ, ಕೊಠಡಿಯ, ಸ್ಥಳದ ಅಥವಾ ಅದರ ಭಾಗದ ಬಾಡಿಗೆದಾರನಿಗೆ, ಗುತ್ತಿಗೆಗೆ ಪಡೆದವನಿಗೆ ಅಥವಾ ಅಧಿಭೋಗದಾರನಿಗೆ ಅಥವಾ ಅದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿರುವ ಇತರ ಯಾರೇ ವ್ಯಕ್ತಿಗೆ, ಅದನ್ನು ಅನುಚಿತವಾಗಿ ಉಪಯೋಗಿಸಿದ್ದಕ್ಕಾಗಿ ಅದನ್ನು ಏಕೆ ಜಪ್ತಿ ಮಾಡಕೂಡದೆಂಬ ಬಗ್ಗೆ ನೋಟೀಸು ತಲುಪಿದ ಏಳು ದಿನಗಳೊಳಗೆ ಕಾರಣ ತೋರಿಸಲು ನೋಟೀಸನ್ನು ಕೊಡತಕ್ಕದ್ದು; ಮತ್ತು ಸಂಬಂಧಪಟ್ಟ ವ್ಯಕ್ತಿಯ ಸುನಾವಣೆ ನಡೆಸಿದ ತರುವಾಯ ಆ ಮನೆ, ಕೊಠಡಿ, ಸ್ಥಳ ಅಥವಾ ಅದರ ಭಾಗವನ್ನು ವೇಶ್ಯಾಗೃಹವಾಗಿ ಅಥವಾ ವೇಶ್ಯಾವೃತ್ತಿ ನಡೆಸಲು ಅದನ್ನು ಉಪಯೋಗಿಸಲಾಗುತ್ತಿದೆ ಎಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಆಗ ಆ ಮ್ಯಾಜಿಸ್ಟ್ರೇಟನು,–

(ಎ) ಆದೇಶವನ್ನು ಮಾಡಿದ ಏಳು ದಿನಗಳೊಳಗೆ ಆ ಮನೆ, ಕೊಠಡಿ, ಸ್ಥಳ ಅಥವಾ ಅದರ ಭಾಗದಿಂದ ಅಧಿಭೋಗದಾರನನ್ನು ಹೊರದೂಡಬೇಕೆಂದು ನಿರ್ದೇಶಿಸುವ;

(ಬಿ) ಆದೇಶವನ್ನು ಮಾಡಿದ ನಿಕಟ ತರುವಾಯದ ಒಂದು ವರ್ಷದ ಅವಧಿಯಲ್ಲಿ, ಅಥವಾ 15ನೇ ಪ್ರಕರಣದ ಮೇರೆಗೆ ಶೋಧನೆಯನ್ನು ನಡೆಸಿದ ಅವಧಿಯಲ್ಲಿ ಅಂಥ ಮನೆ, ಕೊಠಡಿ, ಸ್ಥಳ ಅಥವಾ ಅದರ ಭಾಗದಲ್ಲಿ ಒಂದು ಮಗು ಅಥವಾ ಅಪ್ರಾಪ್ತ ವಯಸ್ಕನು ಕಂಡುಬಂದಿದ್ದ ಸಂದರ್ಭದಲ್ಲಿ, ಮೂರು ವರ್ಷಗಳ ಅವಧಿಯಲ್ಲಿ, ಅದನ್ನು ಬಾಡಿಗೆಗೆ ಕೊಡುವುದಕ್ಕಿಂತ ಮುಂಚೆ, ಒಡೆಯನು, ಗುತ್ತಿಗೆಗೆ ಕೊಟ್ಟವನು ಅಥವಾ ಮಾಲೀಕನು ಅಥವಾ ಒಡೆಯನ, ಗುತ್ತಿಗೆಗೆ ಕೊಟ್ಟವನ ಅಥವಾ ಮಾಲೀಕನ ಏಜೆಂಟನು ಮ್ಯಾಜಿಸ್ಟ್ರೇಟನ ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದೆಂದು ನಿರ್ದೇಶಿಸುವ

– ಆದೇಶಗಳನ್ನು ಹೊರಡಿಸಬಹುದು:

ಪರಂತು, ಆ ಮನೆಯನ್ನು, ಕೊಠಡಿಯನ್ನು, ಸ್ಥಳವನ್ನು ಅಥವಾ ಅದರ ಭಾಗವನ್ನು ಅನುಚಿತವಾಗಿ ಉಪಯೋಗಿಸಿದ ಬಗ್ಗೆ ಒಡೆಯನಿಗೆ, ಗುತ್ತಿಗೆಗೆ ಕೊಟ್ಟವನಿಗೆ ಅಥವಾ ಮಾಲೀಕನಿಗೆ ಹಾಗೂ ಒಡೆಯನ, ಗುತ್ತಿಗೆಗೆ ಕೊಟ್ಟವನ ಅಥವಾ ಮಾಲೀಕನ ಏಜೆಂಟನಿಗೆ ತಿಳಿದಿರಲಿಲ್ಲವೆಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಅವನು ಆ ಮನೆ, ಕೊಠಡಿ, ಸ್ಥಳ ಅಥವಾ ಅದರ ಭಾಗವನ್ನು ಅನುಚಿತವಾಗಿ ಉಪಯೋಗಿಸಲು ಅವಕಾಶ ಮಾಡಿಕೊಟ್ಟ ವ್ಯಕ್ತಿಗೆ ಅಥವಾ ವ್ಯಕ್ತಿಯ ಪ್ರಯೋಜನಕ್ಕಾಗಿ ಗುತ್ತಿಗೆಗೆ ಕೊಡಕೂಡದೆಂದು ಅಥವಾ ಇತರ ರೀತಿಯಲ್ಲಿ ಅದರ ಸ್ವಾಧೀನವನ್ನು ಕೊಡಕೂಡದೆಂದು ನಿರ್ದೇಶಿಸಿ ಅದನ್ನು ಒಡೆಯನಿಗೆ, ಗುತ್ತಿಗೆಗೆ ಕೊಟ್ಟವನಿಗೆ ಅಥವಾ ಒಡೆಯನ, ಗುತ್ತಿಗೆಗೆ ಕೊಟ್ಟವನ ಅಥವಾ ಮಾಲೀಕನ ಏಜೆಂಟನಿಗೆ ಪುನಃ ಒಪ್ಪಿಸುವಂತೆ ಮಾಡಬಹುದು.

(2) 3ನೇ ಪ್ರಕರಣ ಅಥವಾ 7ನೇ ಪ್ರಕರಣದ ಮೇರೆಗೆ ಯಾವುದೇ ಅಪರಾಧಕ್ಕಾಗಿ ಯಾರೇ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸುವ ನ್ಯಾಯಾಲಯವು, ಆ ಉಪಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಕಾರಣ ತೋರಿಸಲು ಮತ್ತೆ ನೋಟೀಸು ಕೊಡದೆ (1)ನೇ ಉಪಪ್ರಕರಣದ ಮೇರೆಗೆ ಆದೇಶಗಳನ್ನು ಹೊರಡಿಸಬಹುದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ಹೊರಡಿಸಿದ ಆದೇಶಗಳು ಅಪೀಲಿಗೆ ಒಳಪಡತಕ್ಕದ್ದಲ್ಲ ಮತ್ತು ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ನ್ಯಾಯಾಲಯದ ಆದೇಶದಿಂದ ತಡೆಹಿಡಿಯಲ್ಪಡತಕ್ಕದ್ದಲ್ಲ ಅಥವಾ ರದ್ದಾಗತಕ್ಕದ್ದಲ್ಲ ಮತ್ತು ಸದರಿ ಆದೇಶಗಳ ಸಿಂಧುತ್ವವು ಸಂದರ್ಭಾನುಸಾರ ಒಂದು ವರ್ಷ ಅಥವಾ ಮೂರು ವರ್ಷಗಳು ಮುಕ್ತಾಯವಾದ ಬಳಿಕ ಕೊನೆಗೊಳ್ಳತಕ್ಕದ್ದು:

ಪರಂತು, 3ನೇ ಪ್ರಕರಣ ಮತ್ತು 7ನೇ ಪ್ರಕರಣದ ಮೇರೆಗಿನ ಅಪರಾಧ ನಿರ್ಣಯವು ಅಂಥ ಮನೆ, ಕೊಠಡಿ, ಸ್ಥಳ ಅಥವಾ ಅದರ ಯಾವುದೇ ಭಾಗವನ್ನು ವೇಶ್ಯಾಗೃಹವಾಗಿ ನಡೆಸಲಾಗುತ್ತಿಲ್ಲವೆಂಬ ಅಥವಾ ಹಾಗೆ ಉಪಯೋಗಿಸಲಾಗುತ್ತಿಲ್ಲವೆಂಬ ಅಥವಾ ವೇಶ್ಯೆಯರು ತಮ್ಮ ವೃತ್ತಿಯನ್ನು ನಡೆಸಲು ಅದನ್ನು ಉಪಯೋಗಿಸುತ್ತಿಲ್ಲವೆಂಬ ಕಾರಣದ ಮೇಲೆ ಅಪೀಲಿನಲ್ಲಿ ರದ್ದಾದರೆ, (1)ನೇ ಉಪಪ್ರಕರಣದ ಮೇರೆಗೆ ವಿಚಾರಣಾ ನ್ಯಾಯಾಲಯವು ಹೊರಡಿಸಿದ ಯಾವುದೇ ಆದೇಶವು ಸಹ ರದ್ದಾಗತಕ್ಕದ್ದು.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, (1)ನೇ ಉಪಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನು ಆದೇಶವನ್ನು ಹೊರಡಿಸಿದಾಗ, ಅಥವಾ (2)ನೇ ಉಪಪ್ರಕರಣದ ಮೇರೆಗೆ ನ್ಯಾಯಾಲಯವು ಆದೇಶವನ್ನು ಹೊರಡಿಸಿದಾಗ, ಆ ಕಾಲದಲ್ಲಿ ಆ ಮನೆ, ಕೊಠಡಿ, ಸ್ಥಳ ಅಥವಾ ಅದರ ಭಾಗವನ್ನು ಯಾವ ಗುತ್ತಿಗೆಯ ಅಥವಾ ಒಪ್ಪಂದದ ಮೇರೆಗೆ ಅಧಿಭೋಗಕ್ಕೆ ತೆಗೆದುಕೊಳ್ಳಲಾಗಿತ್ತೋ, ಆ ಯಾವುದೇ ಗುತ್ತಿಗೆಯು ಅಥವಾ ಒಪ್ಪಂದವು ಶೂನ್ಯವೂ, ನಿಷ್ಕ್ರಿಯವೂ ಆಗತಕ್ಕದ್ದು.

(5) (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಕೊಟ್ಟ ನಿರ್ದೇಶನಗಳನ್ನು ಒಡೆಯ, ಗುತ್ತಿಗೆಗೆ ಕೊಟ್ಟವನು ಅಥವಾ ಮಾಲೀಕನು ಅಥವಾ ಅಂಥ ಒಡೆಯನ, ಗುತ್ತಿಗೆಗೆ ಕೊಟ್ಟವನ ಅಥವಾ ಮಾಲೀಕನ ಏಜೆಂಟನು ಪಾಲಿಸಲು ತಪ್ಪಿದಲ್ಲಿ, ಅವನು ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು ಅಥವಾ ಅವನು ಆ ಉಪಪ್ರಕರಣದ ಪರಂತುಕದ ಮೇರೆಗಿನ ನಿರ್ದೇಶನವನ್ನು ಪಾಲಿಸಲು ತಪ್ಪಿದಲ್ಲಿ, ಸಂದರ್ಭಾನುಸಾರ 3ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗಿನ ಅಥವಾ 7ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ಮೇರೆಗಿನ ಅಪರಾಧವನ್ನು ಇವನು ಮಾಡಿದ್ದಾನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**19. ಸಂರಕ್ಷಾ ಗೃಹದಲ್ಲಿ ಇಟ್ಟುಕೊಳ್ಳುವುದಕ್ಕಾಗಿ ಅಥವಾ ನ್ಯಾಯಾಲಯವು ಆರೈಕೆ ಮತ್ತು ರಕ್ಷಣೆಯನ್ನು ಒದಗಿಸುವುದಕ್ಕಾಗಿ ಸಲ್ಲಿಸುವ ಅರ್ಜಿ.–** (1) ವೇಶ್ಯಾವೃತ್ತಿಯನ್ನು ನಡೆಸುತ್ತಿರುವ ಅಥವಾ ಹಾಗೆ ನಡೆಸುವಂತೆ ಮಾಡಲಾಗಿರುವ ಯಾರೇ ವ್ಯಕ್ತಿಯು, ಯಾವ ಮ್ಯಾಜಿಸ್ಟ್ರೇಟನ ಅಧಿಕಾರ ವ್ಯಾಪ್ತಿಗೆ ಸೇರಿರುವ ಸ್ಥಳೀಯ ಪರಿಮಿತಿಗಳಲ್ಲಿ ತಾನು ವೇಶ್ಯಾವೃತ್ತಿಯನ್ನು ನಡೆಸುತ್ತಿರುವನೋ ಅಥವಾ ಹಾಗೆ ನಡೆಸುವಂತೆ ಮಾಡಲಾಗಿರುವನೋ ಆ ಮ್ಯಾಜಿಸ್ಟ್ರೇಟನಿಗೆ,–

(ಎ) ತನ್ನನ್ನು ಸಂರಕ್ಷಾ ಗೃಹದಲ್ಲಿ ಇಟ್ಟುಕೊಳ್ಳಬೇಕೆಂಬ, ಅಥವಾ

(ಬಿ) ತನಗೆ (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ನ್ಯಾಯಾಲಯವು ಆರೈಕೆ ಮತ್ತು ರಕ್ಷಣೆಯನ್ನು ಒದಗಿಸಬೇಕೆಂಬ

– ಆದೇಶವನ್ನು ಮಾಡಲು ಅರ್ಜಿಯನ್ನು ಸಲ್ಲಿಸಬಹುದು.

(2) (3)ನೇ ಉಪಪ್ರಕರಣದ ಮೇರೆಗಿನ ವಿಚಾರಣೆಯು ಇತ್ಯರ್ಥದಲ್ಲಿರುವಾಗ ಮ್ಯಾಜಿಸ್ಟ್ರೇಟನು, ಪ್ರಕರಣದ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಆ ವ್ಯಕ್ತಿಯನ್ನು ತಾನು ಸೂಕ್ತವೆಂದು ಪರಿಗಣಿಸಬಹುದಾದಂಥ ಅಭಿರಕ್ಷೆಯಲ್ಲಿ ಇಡಬೇಕೆಂದು ನಿರ್ದೇಶಿಸಬಹುದು.

(3) ಮ್ಯಾಜಿಸ್ಟ್ರೇಟನು, ಅರ್ಜಿದಾರನ ಸುನಾವಣೆ ನಡೆಸಿದ ತರುವಾಯ ಮತ್ತು ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958ರ (1958ರ 20) ಮೇರೆಗೆ ನೇಮಕಗೊಂಡ ಪರಿವೀಕ್ಷಣಾಧಿಕಾರಿಯು, ಅರ್ಜಿದಾರನ ವ್ಯಕ್ತಿತ್ವ, ಮನೆಯವರ ಸ್ಥಿತಿ-ಗತಿ ಮತ್ತು ಪುನರ್ವಸತಿಯ ಸಾಧಕ ಬಾಧಕಗಳ ಬಗ್ಗೆ ನಡೆಸುವ ವಿಚಾರಣೆಯೂ ಸೇರಿ ತಾನು ಅವಶ್ಯವೆಂದು ಪರಿಗಣಿಸಬಹುದಾದ ವಿಚಾರಣೆಯನ್ನು ನಡೆಸಿದ ತರುವಾಯ, ಈ ಪ್ರಕರಣದ ಮೇರೆಗೆ ಆದೇಶವನ್ನು ಮಾಡಬೇಕೆಂದು ಅವನಿಗೆ ಮನದಟ್ಟಾದರೆ, ಅವನು ಕಾರಣಗಳನ್ನು ದಾಖಲಿಸಿ, ಅರ್ಜಿದಾರನನ್ನು,-

(i) ಸಂರಕ್ಷಾ ಗೃಹದಲ್ಲಿ, ಅಥವಾ

(ii) ಸುಧಾರಕ ಸಂಸ್ಥೆಯಲ್ಲಿ, ಅಥವಾ

(iii) ಮ್ಯಾಜಿಸ್ಟ್ರೇಟನು ನೇಮಿಸಿದ ವ್ಯಕ್ತಿಯ ಮೇಲ್ವಿಚಾರಣೆಯಲ್ಲಿ

– ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಇಡಬೇಕೆಂಬ ಆದೇಶವನ್ನು ಮಾಡತಕ್ಕದ್ದು.

**20. ಯಾವುದೇ ಸ್ಥಳದಿಂದ ವೇಶ್ಯೆಯನ್ನು ಸ್ಥಳಾಂತರಿಸುವುದು.**- (1) ಮ್ಯಾಜಿಸ್ಟ್ರೇಟನು, ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಸ್ಥಳೀಯ ಪರಿಮಿತಿಯೊಳಗೆ ಯಾವುದೇ ಸ್ಥಳದಲ್ಲಿ ವಾಸಿಸುವ ಅಥವಾ ಆಗಾಗ್ಗೆ ಅಲ್ಲಿ ಹೋಗಿಬರುವ ಯಾರೇ ವ್ಯಕ್ತಿಯು ವೇಶ್ಯೆಯೆಂದು ಮಾಹಿತಿಯನ್ನು ಸ್ವೀಕರಿಸಿದ ಮೇಲೆ, ತಾನು ಸ್ವೀಕರಿಸಿದ ಮಾಹಿತಿಯ ಸಾರಾಂಶವನ್ನು ದಾಖಲಿಸಬಹುದು ಮತ್ತು ಅಂಥ ವ್ಯಕ್ತಿಯು ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗುವಂತೆ ಅಗತ್ಯಪಡಿಸಿ ಮತ್ತು ಅವನನ್ನು ಆ ಸ್ಥಳದಿಂದ ಹೊರಹೋಗುವಂತೆ ಮತ್ತು ಅಲ್ಲಿಗೆ ಪುನಃ ಪ್ರವೇಶಿಸದಂತೆ ಏಕೆ ನಿಷೇಧಿಸಬಾರದು ಎಂಬುದಕ್ಕೆ ಕಾರಣ ತೋರಿಸುವಂತೆ ಅಗತ್ಯಪಡಿಸಿ ನೋಟೀಸನ್ನು ಅವನಿಗೆ ನೀಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನೀಡಿದ ಪ್ರತಿಯೊಂದು ನೋಟೀಸಿನ ಜೊತೆಗೆ ಮೇಲೆ ಹೇಳಿದ ಅಭಿಲೇಖದ ಒಂದು ಪ್ರತಿಯು ಇರತಕ್ಕದ್ದು ಮತ್ತು ಯಾವ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡಲಾಗಿದೆಯೋ ಆ ವ್ಯಕ್ತಿಗೆ ಆ ನೋಟೀಸಿನ ಜೊತೆಗೆ ಆ ಪ್ರತಿಯನ್ನು ನೀಡತಕ್ಕದ್ದು.

(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸನ್ನು ಜಾರಿ ಮಾಡಿದ ತರುವಾಯ, ಮ್ಯಾಜಿಸ್ಟ್ರೇಟನು ತಾನು ಸ್ವೀಕರಿಸಿದ ಮಾಹಿತಿಯ ಸತ್ಯಾಂಶದ ಬಗ್ಗೆ ವಿಚಾರಣೆಗೆ ತೊಡಗತಕ್ಕದ್ದು ಮತ್ತು ಆ ವ್ಯಕ್ತಿಗೆ ಸಾಕ್ಷ್ಯವನ್ನು ಒದಗಿಸಲು ಅವಕಾಶ ಕೊಟ್ಟ ತರುವಾಯ, ತಾನು ಸೂಕ್ತವೆಂದು ಭಾವಿಸುವಂಥ ಮತ್ತಷ್ಟು ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಅಂಥ ವಿಚಾರಣೆಯನ್ನು ನಡೆಸಿದ ತರುವಾಯ, ಅಂಥ ವ್ಯಕ್ತಿಯು ವೇಶ್ಯೆಯೆಂದು ಕಂಡುಬಂದರೆ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ, ಅಂಥ ವ್ಯಕ್ತಿಯು ಸ್ವತಃ ಅಲ್ಲಿಂದ ಹೊರಗೆ ಹೋಗುವಂತೆ ಅವನನ್ನು ಅಗತ್ಯಪಡಿಸುವುದು ಮತ್ತು ಅಲ್ಲಿಗೆ ಪುನಃ ಪ್ರವೇಶಿಸದಂತೆ ನಿಷೇಧಿಸುವುದು ಅವಶ್ಯವಾಗಿದ್ದರೆ ಮ್ಯಾಜಿಸ್ಟ್ರೇಟನು, ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಆ ವ್ಯಕ್ತಿಗೆ ಆ ಆದೇಶದ ದಿನಾಂಕದಿಂದ ಏಳು ದಿನಗಳಿಗೆ ಕಡಿಮೆಯಿಲ್ಲದ ಆದರೆ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದ ತರುವಾಯ (ಆ ದಿನಾಂಕವನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಬೇಕು) ಆ ಸ್ಥಳದಿಂದ ತನ್ನ ಸ್ಥಳೀಯ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗಿನ ಅಥವಾ ಹೊರಗಿನ ಸ್ಥಳಕ್ಕೆ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮಾರ್ಗದ ಅಥವಾ ಮಾರ್ಗಗಳ ಮೂಲಕ ಮತ್ತು ಅಂಥ ಕಾಲದೊಳಗೆ ಅವನು ಸ್ಥಳಾಂತರ ಹೊಂದಬೇಕೆಂದು ಅಗತ್ಯಪಡಿಸತಕ್ಕದ್ದು ಮತ್ತು ಅಂಥ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನ ಲಿಖಿತ ಅನುಮತಿಯಿಲ್ಲದೆ ಆ ಸ್ಥಳವನ್ನು ಅವನು ಪುನಃ ಪ್ರವೇಶಿಸದಂತೆಯೂ ನಿಷೇಧಿಸತಕ್ಕದ್ದು.

(4) ಯಾರಾದರೂ,-

(ಎ) ಈ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶವನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಪಾಲಿಸಲು ತಪ್ಪಿದರೆ ಅಥವಾ ಯಾವುದೇ ಸ್ಥಳಕ್ಕೆ ಅವನು ಪುನಃ ಪ್ರವೇಶಿಸುವುದನ್ನು ನಿಷೇಧಿಸುವ ಆದೇಶವು ಜಾರಿಯಲ್ಲಿರುವಾಗ ಅನುಮತಿ ಇಲ್ಲದೆ ಅಂಥ ಸ್ಥಳವನ್ನು ಪುನಃ ಪ್ರವೇಶಿಸಿದರೆ; ಅಥವಾ

(ಬಿ) ಈ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯನ್ನು ಆ ಸ್ಥಳದಿಂದ ಹೊರಕ್ಕೆ ಹೋಗಲು ಅಗತ್ಯಪಡಿಸಲಾಗಿದ್ದು ಮತ್ತು ಆ ಸ್ಥಳವನ್ನು ಪುನಃ ಪ್ರವೇಶಿಸಲು ಅಗತ್ಯವಾದ ಅನುಮತಿಯನ್ನು ಪಡೆದಿಲ್ಲವೆಂದು ತಿಳಿದೂ ಅಂಥ ವ್ಯಕ್ತಿಗೆ ಆ ಸ್ಥಳದಲ್ಲಿ ಇರಲು ಆಶ್ರಯಕೊಟ್ಟರೆ ಅಥವಾ ಅವನನ್ನು ಬಚ್ಚಿಟ್ಟರೆ

– ಅವರು ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಅಪರಾಧವು ಮುಂದುವರಿದ ಸಂದರ್ಭದಲ್ಲಿ ಆ ಅಪರಾಧವನ್ನು ಬಿಡದೆ ಮುಂದುವರಿಸುವ ಪ್ರಥಮ ದಿನದ ತರುವಾಯದ ಪ್ರತಿಯೊಂದು ದಿನಕ್ಕೆ ಇಪ್ಪತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯರಾಗತಕ್ಕದ್ದು.

**21. ಸಂರಕ್ಷಾ ಗೃಹಗಳು.**- (1) ರಾಜ್ಯ ಸರ್ಕಾರವು ತಾನು ಸೂಕ್ತವೆಂದು ಭಾವಿಸುವಷ್ಟು ಸಂರಕ್ಷಾ ಗೃಹಗಳನ್ನು ಮತ್ತು ಸುಧಾರಕ ಸಂಸ್ಥೆಗಳನ್ನು ಈ ಅಧಿನಿಯಮದ ಮೇರೆಗೆ ತನ್ನ ವಿವೇಚನಾನುಸಾರ ಸ್ಥಾಪಿಸಬಹುದು ಮತ್ತು ಅಂಥ ಗೃಹಗಳು ಮತ್ತು ಸಂಸ್ಥೆಗಳನ್ನು ಸ್ಥಾಪಿಸಿದಾಗ ಅವುಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು.

(2) ರಾಜ್ಯ ಸರ್ಕಾರದ ಹೊರತಾಗಿ ಯಾರೇ ವ್ಯಕ್ತಿಯು ಅಥವಾ ಯಾವುದೇ ಪ್ರಾಧಿಕಾರವು ಈ ಅಧಿನಿಯಮವು ಪ್ರಾರಂಭವಾದ ತರುವಾಯ, ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಕೊಟ್ಟ ಲೈಸೆನ್ಸಿನ ಮೇರೆಗೆ ಮತ್ತು ಅದರ ಷರತ್ತುಗಳಿಗೆ ಅನುಸಾರವಾಗಿ ಹೊರತು ಯಾವುದೇ ಸಂರಕ್ಷಾ ಗೃಹವನ್ನು ಅಥವಾ ಸುಧಾರಕ ಸಂಸ್ಥೆಯನ್ನು ಸ್ಥಾಪಿಸತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ.

(3) ರಾಜ್ಯ ಸರ್ಕಾರವು, ಯಾರೇ ವ್ಯಕ್ತಿಯು ಅಥವಾ ಪ್ರಾಧಿಕಾರವು ಈ ಸಂಬಂಧದಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ಅಂಥ ವ್ಯಕ್ತಿಗೆ ಅಥವಾ ಪ್ರಾಧಿಕಾರಕ್ಕೆ, ಸಂದರ್ಭಾನುಸಾರ, ಸಂರಕ್ಷಾ ಗೃಹ ಅಥವಾ ಸುಧಾರಕ ಸಂಸ್ಥೆಯನ್ನು ಸ್ಥಾಪಿಸುವುದಕ್ಕಾಗಿ ಅಥವಾ ನಿರ್ವಹಿಸುವುದಕ್ಕಾಗಿ ನಿಯಮಿಸಲಾದ ನಮೂನೆಯಲ್ಲಿ ಲೈಸೆನ್ಸನ್ನು ಕೊಡಬಹುದು ಮತ್ತು ಹಾಗೆ ಕೊಡಲಾದ ಲೈಸೆನ್ಸು, ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳಿಗನುಸಾರ ತಾನು ವಿಧಿಸುವುದು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳನ್ನು ಒಳಗೊಂಡಿರಬಹುದು:

ಪರಂತು, ಅಂಥ ಯಾವುದೇ ಷರತ್ತು ಸಂರಕ್ಷಾ ಗೃಹ ಅಥವಾ ಸುಧಾರಕ ಸಂಸ್ಥೆಯ ವ್ಯವಸ್ಥಾಪನೆಯನ್ನು ಸಾಧ್ಯವಿರುವಲ್ಲೆಲ್ಲ ಸ್ತ್ರೀಯರಿಗೆ ವಹಿಸತಕ್ಕದ್ದೆಂದು ಅಗತ್ಯಪಡಿಸಬಹುದು:

ಮತ್ತೂ ಪರಂತು, ಈ ಅಧಿನಿಯಮದ ಪ್ರಾರಂಭದಲ್ಲಿ ಯಾವುದೇ ಸಂರಕ್ಷಾ ಗೃಹವನ್ನು ನಿರ್ವಹಿಸುತ್ತಿರುವ ವ್ಯಕ್ತಿಯು ಅಥವಾ ಪ್ರಾಧಿಕಾರವು ಅಂಥ ಲೈಸೆನ್ಸು ಕೋರಿ ಅರ್ಜಿ ಸಲ್ಲಿಸಲು ಅಂಥ ಪ್ರಾರಂಭದಿಂದ ಆರು ತಿಂಗಳುಗಳ ಅವಧಿಯವರೆಗೆ ಅವಕಾಶವಿರತಕ್ಕದ್ದು:

ಇದಲ್ಲದೆ, ಸ್ತ್ರೀಯರ ಮತ್ತು ಬಾಲಕಿಯರ ಅನೈತಿಕ ವ್ಯವಹಾರ ದಮನ (ತಿದ್ದುಪಡಿ) ಅಧಿನಿಯಮ, 1978 (1978ರ 46)ರ ಪ್ರಾರಂಭದಲ್ಲಿ ಯಾವುದೇ ಸುಧಾರಕ ಸಂಸ್ಥೆಯನ್ನು ನಿರ್ವಹಿಸುತ್ತಿರುವ ವ್ಯಕ್ತಿಯು ಅಥವಾ ಪ್ರಾಧಿಕಾರವು ಅಂಥ ಲೈಸೆನ್ಸ್ ಕೋರಿ ಅರ್ಜಿ ಸಲ್ಲಿಸಲು ಅಧಿನಿಯಮವು ಹಾಗೆ ಪ್ರಾರಂಭವಾದಂದಿನಿಂದ ಆರು ತಿಂಗಳ ಅವಧಿಯನ್ನು ಅನುಮತಿಸತಕ್ಕದ್ದು.

(4) ಲೈಸೆನ್ಸು ನೀಡುವ ಮೊದಲು, ರಾಜ್ಯ ಸರ್ಕಾರವು, ಈ ಸಂದರ್ಭದಲ್ಲಿ ಸ್ವೀಕರಿಸಿದ ಅರ್ಜಿಯ ಸಂಬಂಧದಲ್ಲಿ ಪೂರ್ಣ ಮತ್ತು ಸಮಗ್ರ ತನಿಖೆ ನಡೆಸಬೇಕೆಂದು ಮತ್ತು ಅಂಥ ತನಿಖೆಯ ಫಲಿತಾಂಶವನ್ನು ತನಗೆ ವರದಿ ಮಾಡಬೇಕೆಂದು, ಈ ಉದ್ದೇಶಕ್ಕಾಗಿ ತಾನು ನೇಮಿಸಬಹುದಾದಂಥ ಅಧಿಕಾರಿಯನ್ನು ಅಥವಾ

ಪ್ರಾಧಿಕಾರವನ್ನು ಅಗತ್ಯಪಡಿಸಬಹುದು ಮತ್ತು ಆ ಅಧಿಕಾರಿಯು ಅಥವಾ ಪ್ರಾಧಿಕಾರವು ಅಂಥ ಯಾವುದೇ ತನಿಖೆಯನ್ನು ನಡೆಸುವಲ್ಲಿ ನಿಯಮಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(5) ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿರಬಹುದಾದ ಅವಧಿಯ ಮುಂಚೆಯೇ ಅದನ್ನು ರದ್ದುಪಡಿಸಿರದಿದ್ದರೆ, ಆ ಅವಧಿಯವರೆಗೆ ಆ ಲೈಸೆನ್ಸು ಜಾರಿಯಲ್ಲಿರತಕ್ಕದ್ದು ಮತ್ತು ಅದರ ಅವಧಿ ಮುಕ್ತಾಯವಾಗುವ ದಿನಾಂಕಕ್ಕೆ ಕನಿಷ್ಠ ಪಕ್ಷ ಮೂವತ್ತು ದಿನಗಳಿಗೆ ಮುಂಚೆ ಈ ಬಗ್ಗೆ ಸಲ್ಲಿಸಿದ ಅರ್ಜಿಯ ಮೇಲೆ ಅಷ್ಟೇ ಅವಧಿಗಾಗಿ ಅದನ್ನು ನವೀಕರಿಸಬಹುದು.

(6) ಈ ಅಧಿನಿಯಮದ ಮೇರೆಗೆ ಕೊಟ್ಟ ಅಥವಾ ನವೀಕರಿಸಲಾದ ಯಾವ ಲೈಸೆನ್ಸನ್ನೂ ವರ್ಗಾಯಿಸಲು ಅವಕಾಶವಿರತಕ್ಕದ್ದಲ್ಲ.

(7) ಈ ಅಧಿನಿಯಮದ ಮೇರೆಗೆ ಲೈಸೆನ್ಸನ್ನು ಕೊಡಲಾಗಿರುವ ಯಾರೇ ವ್ಯಕ್ತಿಯು ಅಥವಾ ಪ್ರಾಧಿಕಾರವು ಅಥವಾ ಅಂಥ ವ್ಯಕ್ತಿಯ ಅಥವಾ ಪ್ರಾಧಿಕಾರದ ಯಾರೇ ಏಜೆಂಟನು ಅಥವಾ ನೌಕರನು ಅದರ ಷರತ್ತುಗಳ ಪೈಕಿ ಯಾವುದೇ ಷರತ್ತನ್ನು ಅಥವಾ ಈ ಅಧಿನಿಯಮದ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ನಿಯಮದ ಉಪಬಂಧಗಳ ಪೈಕಿ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ ಅಥವಾ ಯಾವುದೇ ಸಂರಕ್ಷಾ ಗೃಹದ ಅಥವಾ ಸುಧಾರಕ ಸಂಸ್ಥೆಯ ಸ್ಥಿತಿಗತಿ, ವ್ಯವಸ್ಥಾಪನೆ ಅಥವಾ ಅಧೀಕ್ಷಣೆಯ ಬಗ್ಗೆ ರಾಜ್ಯ ಸರ್ಕಾರಕ್ಕೆ ತೃಪ್ತಿಯಾಗದಿದ್ದರೆ ಈ ಅಧಿನಿಯಮದ ಮೇರೆಗೆ ಗುರಿಯಾಗಬಹುದಾದ ಇತರ ಯಾವುದೇ ದಂಡಕ್ಕೆ ಪ್ರತಿಕೂಲವಾಗದ ಹಾಗೆ, ಕಾರಣಗಳನ್ನು ದಾಖಲಿಸಿ, ರಾಜ್ಯ ಸರ್ಕಾರವು ಲಿಖಿತ ಆದೇಶದ ಮೂಲಕ ಆ ಲೈಸೆನ್ಸನ್ನು ರದ್ದುಗೊಳಿಸಬಹುದು:

ಪರಂತು, ಲೈಸೆನ್ಸನ್ನು ಏಕೆ ರದ್ದುಪಡಿಸಕೂಡದೆಂಬುದಕ್ಕೆ ಕಾರಣವನ್ನು ತೋರಿಸಲು ಲೈಸೆನ್ಸುದಾರನಿಗೆ ಅವಕಾಶವನ್ನು ಕೊಟ್ಟ ಹೊರತು, ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(8) ಹಿಂದೆ ಹೇಳಿದ ಉಪಪ್ರಕರಣದ ಮೇರೆಗೆ ಒಂದು ಸಂರಕ್ಷಾ ಗೃಹದ ಅಥವಾ ಸುಧಾರಕ ಸಂಸ್ಥೆಯ ಲೈಸೆನ್ಸನ್ನು ರದ್ದುಪಡಿಸಿರುವಲ್ಲಿ, ಹಾಗೆ ರದ್ದಾದ ದಿನಾಂಕದಿಂದ ಅಂಥ ಸಂರಕ್ಷಾ ಗೃಹದ ಕಾರ್ಯನಿರ್ವಹಣೆಯು ಸಮಾಪ್ತವಾಗತಕ್ಕದ್ದು.

(9) ಈ ಅಧಿನಿಯಮದ ಮೇರೆಗೆ ಕೊಡಲಾದ ಅಥವಾ ನವೀಕರಿಸಲಾದ ಯಾವುದೇ ಲೈಸೆನ್ಸನ್ನು ಈ ಬಗ್ಗೆ ರಚಿಸಬಹುದಾದ ಯಾವುದೇ ನಿಯಮಗಳಿಗೊಳಪಟ್ಟು, ರಾಜ್ಯ ಸರ್ಕಾರವು ಬದಲಾಯಿಸಲೂಬಹುದು ಅಥವಾ ತಿದ್ದುಪಡಿ ಮಾಡಬಹುದು.

(9ಎ) ರಾಜ್ಯ ಸರ್ಕಾರವು ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ಅಧಿಕಾರ ಪಡೆದ ಪ್ರಾಧಿಕಾರವು, ಈ ಸಂಬಂಧದಲ್ಲಿ ರಚಿಸಬಹುದಾದ ಯಾವುದೇ ನಿಯಮಗಳಿಗೊಳಪಟ್ಟು, ವರ್ಗಾವಣೆ ಮಾಡಬೇಕಾದ ವ್ಯಕ್ತಿಯ ನಡತೆ, ನೀಡಬೇಕಾದ ತರಬೇತಿಯ ಬಗೆ ಮತ್ತು ಪ್ರಕರಣದ ಇತರ ಪರಿಸ್ಥಿತಿಗಳನ್ನು ಗಮನಿಸಿ, ಅಂಥ ವರ್ಗಾವಣೆಯು ಅಪೇಕ್ಷಣೀಯವೆಂದು ಪರಿಗಣಿಸಿರುವಲ್ಲಿ, ಒಂದು ಸಂರಕ್ಷಾ ಗೃಹದ ನಿವಾಸಿಯನ್ನು ಇನ್ನೊಂದು ಸಂರಕ್ಷಾ ಗೃಹಕ್ಕೆ ಅಥವಾ ಸುಧಾರಕ ಸಂಸ್ಥೆಗೆ ಅಥವಾ ಸುಧಾರಕ ಸಂಸ್ಥೆಯು ನಿವಾಸಿಯನ್ನು ಇನ್ನೊಂದು ಸುಧಾರಕ ಸಂಸ್ಥೆಗೆ ಅಥವಾ ಸಂರಕ್ಷಾ ಗೃಹಕ್ಕೆ ವರ್ಗಾವಣೆ ಮಾಡಬಹುದು:

ಪರಂತು,-

(ಎ) ಈ ಉಪಪ್ರಕರಣದ ಮೇರೆಗೆ ವರ್ಗಾವಣೆಯಾದ ಯಾರೇ ವ್ಯಕ್ತಿಯನ್ನು ಯಾವ ಸಂರಕ್ಷಾಗೃಹ ಅಥವಾ ಸಂಸ್ಥೆಯಿಂದ ವರ್ಗಾಯಿಸಲಾಗಿದೆಯೋ ಆ ಸಂರಕ್ಷಾಗೃಹ ಅಥವಾ ಸಂಸ್ಥೆಯಲ್ಲಿ ಅವನು ಉಳಿಯಬೇಕಾಗಿದ್ದ ಅವಧಿಗಿಂತ ಹೆಚ್ಚಿನ ಅವಧಿಯವರೆಗೆ ಯಾವ ಸಂರಕ್ಷಾಗೃಹ ಅಥವಾ ಸಂಸ್ಥೆಗೆ ಅವನನ್ನು ವರ್ಗಾಯಿಸಲಾಗಿದೆಯೋ ಆ ಸಂರಕ್ಷಾಗೃಹ ಅಥವಾ ಸಂಸ್ಥೆಯಲ್ಲಿ ಉಳಿಯುವಂತೆ ಅಗತ್ಯಪಡಿಸತಕ್ಕದ್ದಲ್ಲ;

(ಬಿ) ಈ ಪ್ರಕರಣದ ಮೇರೆಗೆ ಮಾಡಿದ ವರ್ಗಾವಣೆಯ ಪ್ರತಿಯೊಂದು ಆದೇಶದ ಬಗ್ಗೆ ಕಾರಣಗಳನ್ನು ದಾಖಲಿಸತಕ್ಕದ್ದು.

(10) ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ಹೊರತು, ಯಾರೇ ವ್ಯಕ್ತಿಯು ಒಂದು ಸಂರಕ್ಷಾ ಗೃಹ ಅಥವಾ ಸುಧಾರಕ ಸಂಸ್ಥೆಯನ್ನು ಸ್ಥಾಪಿಸಿದರೆ, ಅಥವಾ ಅದನ್ನು ನಿರ್ವಹಿಸಿದರೆ, ಅವನು ಮೊದಲನೆಯ ಅಪರಾಧದ ಸಂದರ್ಭದಲ್ಲಿ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**21ಎ. ದಾಖಲೆಗಳನ್ನು ಹಾಜರುಪಡಿಸುವುದು.**- ಒಂದು ಸಂರಕ್ಷಾ ಗೃಹ ಅಥವಾ ಸುಧಾರಕ ಸಂಸ್ಥೆಯನ್ನು ಸ್ಥಾಪಿಸಲು ಅಥವಾ ನಿರ್ವಹಿಸಲು ಅಥವಾ ಸಂದರ್ಭಾನುಸಾರ ಅದನ್ನು ನಿರ್ವಹಿಸುವುದಕ್ಕಾಗಿ 21ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸು ಪಡೆದ ಪ್ರತಿಯೊಬ್ಬ ವ್ಯಕ್ತಿಯು ಅಥವಾ ಪ್ರಾಧಿಕಾರವು, ನ್ಯಾಯಾಲಯವು ಅಗತ್ಯಪಡಿಸಿದಾಗಲೆಲ್ಲಾ ಅಂಥ ಗೃಹ ಅಥವಾ ಸಂಸ್ಥೆಯು ಇಟ್ಟುಕೊಂಡು ಬಂದಿರುವ ದಾಖಲೆಗಳು ಮತ್ತು ಇತರ ದಸ್ತಾವೇಜುಗಳನ್ನು ಅಂಥ ನ್ಯಾಯಾಲಯದ ಮುಂದೆ ಹಾಜರುಪಡಿಸತಕ್ಕದ್ದು.

**22. ಅಧಿವಿಚಾರಣೆಗಳು.**- ಮಹಾನಗರ ಮ್ಯಾಜಿಸ್ಟ್ರೇಟನ ಅಥವಾ ಮೊದಲನೇ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು 3ನೇ ಪ್ರಕರಣದ, 4ನೇ ಪ್ರಕರಣದ, 5ನೇ ಪ್ರಕರಣದ, 6ನೇ ಪ್ರಕರಣದ, 7ನೇ ಪ್ರಕರಣದ ಅಥವಾ 8ನೇ ಪ್ರಕರಣದ ಮೇರೆಗಿನ ಯಾವುದೇ ಅಪರಾಧದ ಅಧಿವಿಚಾರಣೆ ನಡೆಸತಕ್ಕದ್ದಲ್ಲ.

**22ಎ. ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ಅಧಿಕಾರ.**- (1) ಯಾವುದೇ ಜಿಲ್ಲೆ ಅಥವಾ ಮಹಾನಗರ ಪ್ರದೇಶದಲ್ಲಿ ಈ ಅಧಿನಿಯಮದ ಮೇರೆಗೆ ಅಪರಾಧಗಳ ಶೀಘ್ರ ಅಧಿವಿಚಾರಣೆಯನ್ನು ನಡೆಸುವ ವ್ಯವಸ್ಥೆ ಮಾಡುವ ಉದ್ದೇಶಕ್ಕಾಗಿ ಮೊದಲನೇ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟರ ಒಂದು ಅಥವಾ ಹೆಚ್ಚು ನ್ಯಾಯಾಲಯಗಳನ್ನು ಸ್ಥಾಪಿಸುವುದು ಅವಶ್ಯವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಅದು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಉಚ್ಚನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಮೊದಲನೇ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ಅಥವಾ ಸಂದರ್ಭಾನುಸಾರ ಮಹಾನಗರ ಮ್ಯಾಜಿಸ್ಟ್ರೇಟರ ಒಂದು ಅಥವಾ ಹೆಚ್ಚು ನ್ಯಾಯಾಲಯಗಳನ್ನು ಅಂಥ ಜಿಲ್ಲೆ ಅಥವಾ ಮಹಾನಗರ ಪ್ರದೇಶದಲ್ಲಿ ಸ್ಥಾಪಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ನ್ಯಾಯಾಲಯವು, ಉಚ್ಚ ನ್ಯಾಯಾಲಯವು ಅನ್ಯಥಾ ನಿರ್ದೇಶಿಸಿದ ಹೊರತು, ಈ ಅಧಿನಿಯಮದ ಮೇರೆಗಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾತ್ರ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸತಕ್ಕದ್ದು.

(3) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾವುದೇ ಜಿಲ್ಲೆ ಅಥವಾ ಮಹಾನಗರ ಪ್ರದೇಶದಲ್ಲಿ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ನ್ಯಾಯಾಲಯದ ಅಧ್ಯಕ್ಷಾಧಿಕಾರಿಯ ಅಧಿಕಾರ ವ್ಯಾಪ್ತಿಯು ಮತ್ತು ಅಧಿಕಾರಗಳು ಸಂದರ್ಭಾನುಸಾರ ಜಿಲ್ಲೆಯಾದ್ಯಂತ ಅಥವಾ ಮಹಾನಗರ ಪ್ರದೇಶದಾದ್ಯಂತ ವ್ಯಾಪ್ತವಾಗತಕ್ಕದ್ದು.

(4) ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳಿಗೊಳಪಟ್ಟು, ಯಾವುದೇ ಜಿಲ್ಲೆ ಅಥವಾ ಮಹಾನಗರ ಪ್ರದೇಶದಲ್ಲಿ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ನ್ಯಾಯಾಲಯವನ್ನು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 11ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ ಸಂದರ್ಭಾನುಸಾರ 16ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ನ್ಯಾಯಾಲಯವೆಂದು ಭಾವಿಸತಕ್ಕದ್ದು ಮತ್ತು ಆ ಸಂಹಿತೆಯ ಉಪಬಂಧಗಳು ತದನುಸಾರವಾಗಿ ಅಂಥ ನ್ಯಾಯಾಲಯಗಳಿಗೆ ಸಂಬಂಧಿಸಿ ಅನ್ವಯವಾಗತಕ್ಕದ್ದು.

**ವಿವರಣೆ.**- ಈ ಪ್ರಕರಣದಲ್ಲಿ, "ಉಚ್ಚ ನ್ಯಾಯಾಲಯ" ಎಂಬ ಪದವು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 2ನೇ ಪ್ರಕರಣದ (ಇ) ಖಂಡದಲ್ಲಿರುವ ಅರ್ಥವನ್ನು ಹೊಂದಿರತಕ್ಕದ್ದು.

**22ಎಎ. ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರದ ಅಧಿಕಾರ.**- (1) ಈ ಅಧಿನಿಯಮದ ಮೇರೆಗಿನ ಮತ್ತು ಒಂದಕ್ಕಿಂತ ಹೆಚ್ಚಿನ ರಾಜ್ಯಗಳಲ್ಲಿ ಎಸಗಿರುವ ಅಪರಾಧಗಳ ಶೀಘ್ರ ಅಧಿವಿಚಾರಣೆಗೆ ವ್ಯವಸ್ಥೆ ಮಾಡುವ ಉದ್ದೇಶಕ್ಕಾಗಿ ಒಂದು ಅಥವಾ ಹೆಚ್ಚು ಮೊದಲನೇ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ಅಥವಾ ಮಹಾನಗರ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳನ್ನು ಸ್ಥಾಪಿಸುವುದು ಅವಶ್ಯವೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ, ಅದು ಅಂಥ ಅಪರಾಧಗಳ ಅಧಿವಿಚಾರಣೆಗಾಗಿ, ರಾಜಪತ್ರದಲ್ಲಿ ಅಧಿಸೂಚನೆಯ

ಮೂಲಕ ಮತ್ತು ಸಂಬಂಧಪಟ್ಟ ಉಚ್ಚ ನ್ಯಾಯಾಲಯದೊಡನೆ ಸಮಾಲೋಚಿಸಿದ ತರುವಾಯ, ಒಂದು ಅಥವಾ ಹೆಚ್ಚು ಮೊದಲನೇ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ಅಥವಾ ಮಹಾನಗರ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳನ್ನು ಸ್ಥಾಪಿಸಬಹುದು.

(2) 22ಎ ಪ್ರಕರಣದ ಉಪಬಂಧಗಳು, ಆ ಪ್ರಕರಣದ ಮೇರೆಗೆ ಸ್ಥಾಪಿತವಾದ ನ್ಯಾಯಾಲಯಗಳಿಗೆ ಅನ್ವಯವಾಗುವಂತೆಯೇ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ನ್ಯಾಯಾಲಯಗಳಿಗೂ ಆದಷ್ಟುಮಟ್ಟಿಗೆ ಅನ್ವಯವಾಗತಕ್ಕದ್ದು.

**22ಬಿ. ಮೊಕದ್ದಮೆಗಳ ಶೀಘ್ರ ಅಧಿವಿಚಾರಣೆ ನಡೆಸಲು ನ್ಯಾಯಾಲಯದ ಅಧಿಕಾರ.**- ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಇದ್ದರೂ, 22ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ನ್ಯಾಯಾಲಯದ ಅಧ್ಯಕ್ಷಾಧಿಕಾರಿಯು ಸೇರಿದಂತೆ, ಅದರ ಮ್ಯಾಜಿಸ್ಟ್ರೇಟನು ಈ ಅಧಿನಿಯಮದ ಮೇರೆಗಿನ ಅಪರಾಧಗಳ ಕ್ಷಿಪ್ರ ಅಧಿವಿಚಾರಣೆ ನಡೆಸತಕ್ಕದ್ದೆಂದು ನಿರ್ದೇಶಿಸುವುದು ಅವಶ್ಯವೆಂದು ರಾಜ್ಯ ಸರ್ಕಾರವು ಪರಿಗಣಿಸಿದರೆ, ಅದು ಹಾಗೆ ನಿರ್ದೇಶಿಸಬಹುದು ಮತ್ತು ಸದರಿ ಸಂಹಿತೆಯ 262 ರಿಂದ 265ರ ವರೆಗಿನ ಪ್ರಕರಣಗಳ (ಎರಡೂ ಸೇರಿದಂತೆ) ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ ಅಂಥ ಅಧಿವಿಚಾರಣೆಗೆ ಅನ್ವಯವಾಗತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗಿನ ಕ್ಷಿಪ್ರ ಅಧಿವಿಚಾರಣೆಯಲ್ಲಿ ಯಾವುದೇ ಅಪರಾಧವು ನಿರ್ಣಯವಾದ ಸಂದರ್ಭದಲ್ಲಿ, ಒಂದು ವರ್ಷ ಮೀರದ ಅವಧಿಯ ಕಾರಾವಾಸ ಶಿಕ್ಷೆಯ ಆದೇಶವನ್ನು ಹೊರಡಿಸುವುದು ಮ್ಯಾಜಿಸ್ಟ್ರೇಟನಿಗೆ ಕಾನೂನು ಸಮ್ಮತವಾಗಿರತಕ್ಕದ್ದು:

ಮತ್ತೂ ಪರಂತು, ಈ ಪ್ರಕರಣದ ಮೇರೆಗೆ ಶೀಘ್ರ ಅಧಿವಿಚಾರಣೆಯನ್ನು ಪ್ರಾರಂಭಿಸುವಾಗ ಅಥವಾ ನಡೆಸುತ್ತಿರುವಾಗ ಆ ಮೊಕದ್ದಮೆಯು ಒಂದು ವರ್ಷವನ್ನು ಮೀರುವ ಅವಧಿಯ ಕಾರಾವಾಸದ ಶಿಕ್ಷೆಯನ್ನು ಹೊರಡಿಸಬಹುದಾದಂಥ ಸ್ವರೂಪದ್ದಾಗಿದೆ ಎಂದು ಅಥವಾ ಇತರ ಯಾವುದೇ ಕಾರಣಕ್ಕಾಗಿ ಆ ಮೊಕದ್ದಮೆಯನ್ನು ಕ್ಷಿಪ್ರವಾಗಿ ಅಧಿವಿಚಾರಣೆ ನಡೆಸುವುದು ಅಪೇಕ್ಷಣೀಯವಾಗಿರುವುದಿಲ್ಲವೆಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಆ ಮ್ಯಾಜಿಸ್ಟ್ರೇಟನು ಪಕ್ಷಕಾರರ ಸುನಾವಣೆ ನಡೆಸಿದ ತರುವಾಯ, ಆ ಬಗ್ಗೆ ಆದೇಶವನ್ನು ದಾಖಲಿಸತಕ್ಕದ್ದು ಮತ್ತು ಆ ತರುವಾಯ ಪರೀಕ್ಷಿಸಲಾದ ಯಾರೇ ಸಾಕ್ಷಿದಾರನನ್ನು ಪುನಃ ಕರೆಸತಕ್ಕದ್ದು ಮತ್ತು ಸದರಿ ಸಂಹಿತೆಯಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಆ ಮೊಕದ್ದಮೆಯ ಸುನಾವಣೆ ಅಥವಾ ಮರುಸುನಾವಣೆ ನಡೆಸಲು ಪ್ರಾರಂಭಿಸತಕ್ಕದ್ದು.

**23. ನಿಯಮ ರಚನಾಧಿಕಾರ.**- (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿರುವ ಅಧಿಕಾರಗಳ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ನಿಯಮಗಳು,-

(ಎ) ಯಾವುದೇ ಸ್ಥಳವನ್ನು ಸಾರ್ವಜನಿಕ ಸ್ಥಳವೆಂದು ಅಧಿಸೂಚಿಸುವುದು;

(ಬಿ) 17ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗಳ ಸುರಕ್ಷಿತ ಅಭಿರಕ್ಷೆಗಾಗಿ ಆದೇಶವನ್ನು ಹೊರಡಿಸಲಾಗಿದೆಯೋ ಆ ವ್ಯಕ್ತಿಗಳನ್ನು ಅಭಿರಕ್ಷೆಯಲ್ಲಿಡುವುದು ಮತ್ತು ಅವರ ಪೋಷಣೆ;

(ಬಿಬಿ) 10ಎ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸುಧಾರಕ ಸಂಸ್ಥೆಯಿಂದ ಅಪರಾಧಿಯನ್ನು ಬಿಡುಗಡೆ ಮಾಡುವುದು ಮತ್ತು ಅಂಥ ಅಪರಾಧಿಗೆ ನೀಡಬೇಕಾದ ಲೈಸೆನ್ಸಿನ ನಮೂನೆ;

(ಸಿ) ಈ ಅಧಿನಿಯಮದ ಮೇರೆಗೆ ಸಂರಕ್ಷಾ ಗೃಹಗಳಲ್ಲಿ ಅಥವಾ ಸಂದರ್ಭಾನುಸಾರ ಸುಧಾರಕ ಸಂಸ್ಥೆಗಳಲ್ಲಿ ವ್ಯಕ್ತಿಗಳನ್ನು ತಡೆಹಿಡಿದಿಡುವುದು ಮತ್ತು ಇಟ್ಟುಕೊಳ್ಳುವುದು ಮತ್ತು ಅವರ ಪೋಷಣೆ;

(ಡಿ) ಬಿಡುಗಡೆ ಮಾಡಲ್ಪಟ್ಟ ಅಪರಾಧ ನಿರ್ಣೀತ ವ್ಯಕ್ತಿಗಳು, ತಮ್ಮ ವಾಸಸ್ಥಳದ ಅಥವಾ ಅಂಥ ವಾಸಸ್ಥಳದ ಬದಲಾವಣೆಯ ಅಥವಾ ವಾಸಸ್ಥಳದಿಂದ ಗೈರು ಹಾಜರಾಗುವುದನ್ನು

ಅಧಿಸೂಚಿಸುವುದಕ್ಕೆ ಸಂಬಂಧಪಟ್ಟಂತೆ 11ನೇ ಪ್ರಕರಣದ ಉಪಬಂಧಗಳನ್ನು ಕಾರ್ಯಗತಗೊಳಿಸುವುದು;

(ಇ) 13ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿಶೇಷ ಪೊಲೀಸ್ ಅಧಿಕಾರಿಯನ್ನು ನೇಮಿಸಲು ಅಧಿಕಾರವನ್ನು ಪ್ರತ್ಯಾಯೋಜಿಸುವುದು;

(ಎಫ್) 18ನೇ ಪ್ರಕರಣದ ಉಪಬಂಧಗಳನ್ನು ಜಾರಿಗೆ ತರುವುದು;

(ಜಿ) (i) 21ನೇ ಪ್ರಕರಣದ ಮೇರೆಗೆ ಸಂರಕ್ಷಾ ಗೃಹಗಳು ಮತ್ತು ಸುಧಾರಕ ಸಂಸ್ಥೆಗಳ ಸ್ಥಾಪನೆ, ನಿರ್ವಹಣೆ, ವ್ಯವಸ್ಥಾಪನೆ ಮತ್ತು ಅಧೀಕ್ಷಣೆ ಮತ್ತು ಅಂಥ ಗೃಹಗಳಲ್ಲಿ ಅಥವಾ ಸಂಸ್ಥೆಗಳಲ್ಲಿ ನಿಯೋಜಿಸಲಾಗುವ ವ್ಯಕ್ತಿಗಳ ನೇಮಕಾತಿ ಮತ್ತು ಅವರ ಅಧಿಕಾರಗಳು ಹಾಗೂ ಕರ್ತವ್ಯಗಳು;

(ii) ಲೈಸೆನ್ಸಿಗಾಗಿ ಸಲ್ಲಿಸಬಹುದಾದ ಅರ್ಜಿಯ ನಮೂನೆ ಮತ್ತು ಅಂಥ ಅರ್ಜಿಯು ಒಳಗೊಂಡಿರಬೇಕಾದ ವಿವರಗಳು;

(iii) ಲೈಸೆನ್ಸನ್ನು ಕೊಡುವ ಅಥವಾ ನವೀಕರಿಸುವ ಕಾರ್ಯವಿಧಾನ, ಅಂಥ ಲೈಸೆನ್ಸನ್ನು ಕೊಡುವ ಅಥವಾ ನವೀಕರಿಸುವ ಕಾಲಾವಧಿ ಮತ್ತು ಲೈಸೆನ್ಸಿಗಾಗಿ ಸಲ್ಲಿಸುವ ಅರ್ಜಿಯ ಬಗ್ಗೆ ಪೂರ್ಣ ಮತ್ತು ಸಮಗ್ರ ತನಿಖೆಯನ್ನು ನಡೆಸುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(iv) ಲೈಸೆನ್ಸಿನ ನಮೂನೆ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಬೇಕಾದ ಷರತ್ತುಗಳು;

(v) ಸಂರಕ್ಷಾಗೃಹ ಮತ್ತು ಸುಧಾರಕ ಸಂಸ್ಥೆಗಳ ಲೆಕ್ಕಪತ್ರಗಳನ್ನು ಇಡತಕ್ಕ ಮತ್ತು ಪರಿಶೋಧಿಸತಕ್ಕ ರೀತಿ;

(vi) ಲೈಸೆನ್ಸುದಾರನು ಇಡಬೇಕಾದ ರಿಜಿಸ್ಟರುಗಳು ಮತ್ತು ತಃಖ್ತೆಗಳು ಮತ್ತು ಅಂಥ ರಿಜಿಸ್ಟರುಗಳ ಮತ್ತು ತಃಖ್ತೆಗಳ ನಮೂನೆ;

(vii) ಸಂರಕ್ಷಾ ಗೃಹಗಳ ಮತ್ತು ಸುಧಾರಕ ಸಂಸ್ಥೆಗಳ ನಿವಾಸಿಗಳ ಯೋಗಕ್ಷೇಮ, ಆರೈಕೆ, ಪೋಷಣೆ, ತರಬೇತಿ, ಶಿಕ್ಷಣ, ನಿಯಂತ್ರಣ ಮತ್ತು ಶಿಸ್ತು;

(viii) ಅಂಥ ನಿವಾಸಿಗಳನ್ನು ಸಂದರ್ಶಿಸುವುದು ಮತ್ತು ಅವರೊಂದಿಗೆ ಸಂಪರ್ಕಿಸುವುದು;

(ix) ದಂಡನೆಗೆ ಗುರಿಯಾದ ವ್ಯಕ್ತಿಗಳನ್ನು ಸಂರಕ್ಷಾ ಗೃಹಗಳು ಅಥವಾ ಸುಧಾರಕ ಸಂಸ್ಥೆಗಳಲ್ಲಿ ತಡೆಹಿಡಿದಿಡಲು ವ್ಯವಸ್ಥೆ ಮಾಡುವವರೆಗೆ ಅಂಥ ಗೃಹಗಳಿಗೆ ಅಥವಾ ಸಂಸ್ಥೆಗಳಿಗೆ ಕಳುಹಿಸಲು ತಾತ್ಕಾಲಿಕವಾಗಿ ತಡೆಹಿಡಿದಿಡುವುದು;

(x) 21ನೇ ಪ್ರಕರಣದ (9ಎ) ಉಪಪ್ರಕರಣದ ಮೇರೆಗೆ ಒಬ್ಬ ನಿವಾಸಿಯನ್ನು,-

(ಎ) ಒಂದು ಸಂರಕ್ಷಾ ಗೃಹದಿಂದ ಇನ್ನೊಂದು ಸಂರಕ್ಷಾಗೃಹಕ್ಕೆ ಅಥವಾ ಸುಧಾರಕ ಸಂಸ್ಥೆಗೆ;

(ಬಿ) ಒಂದು ಸುಧಾರಕ ಸಂಸ್ಥೆಯಿಂದ ಇನ್ನೊಂದು ಸುಧಾರಕ ಸಂಸ್ಥೆಗೆ ಅಥವಾ ಸಂರಕ್ಷಾ ಗೃಹಕ್ಕೆ

- ವರ್ಗಾಯಿಸುವುದು;

(xi) ತಿದ್ದಲಾಗದವನೆಂದು ಅಥವಾ ಸಂರಕ್ಷಾಗೃಹ ಅಥವಾ ಸುಧಾರಕ ಸಂಸ್ಥೆಯ ನಿವಾಸಿಗಳ ಮೇಲೆ ದುಷ್ಪ್ರಭಾವ ಬೀರುವವನೆಂದು ಕಂಡುಬಂದ ವ್ಯಕ್ತಿಯನ್ನು ನ್ಯಾಯಾಲಯದ ಆದೇಶಾನುಸಾರ ಸಂರಕ್ಷಾ ಗೃಹದಿಂದ ಅಥವಾ ಸುಧಾರಕ ಸಂಸ್ಥೆಯಿಂದ ಸೆರೆಮನೆಗೆ ವರ್ಗಾಯಿಸುವುದು ಮತ್ತು ಅಂಥ ಸೆರೆಮನೆಯಲ್ಲಿ ಅವನನ್ನು ತಡೆಹಿಡಿದಿಡಬೇಕಾದ ಅವಧಿ;

(xii) 7ನೇ ಅಥವಾ 8ನೇ ಪ್ರಕರಣದ ಮೇರೆಗೆ ದಂಡನೆಗೆ ಗುರಿಯಾದ ವ್ಯಕ್ತಿಯನ್ನು ಸಂರಕ್ಷಾ ಗೃಹಕ್ಕೆ ಅಥವಾ ಸುಧಾರಕ ಸಂಸ್ಥೆಗೆ ವರ್ಗಾಯಿಸುವುದು ಮತ್ತು ಅಂಥ ಗೃಹದಲ್ಲಿ ಅವರನ್ನು ತಡೆಹಿಡಿದಿಡಬೇಕಾದ ಅವಧಿ;

(xiii) ಸಂರಕ್ಷಾಗೃಹದಿಂದ ಅಥವಾ ಸುಧಾರಕ ಸಂಸ್ಥೆಯಿಂದ ನಿರುಪಾಧಿಕವಾಗಿ ಅಥವಾ ಷರತ್ತುಗಳಿಗೊಳಪಟ್ಟು ನಿವಾಸಿಗಳನ್ನು ಬಿಡುಗಡೆ ಮಾಡುವುದು ಮತ್ತು ಅಂಥ ಷರತ್ತುಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಅವರ ದಸ್ತಗಿರಿ;

(xiv) ನಿವಾಸಿಗಳಿಗೆ ಅಲ್ಪಾವಧಿಯವರೆಗೆ ಗೈರುಹಾಜರಾಗಲು ಅನುಮತಿ ಕೊಡುವುದು;

(xv) ವ್ಯಕ್ತಿಗಳನ್ನು ಇಡಬಹುದಾದ, ತಡೆಹಿಡಿದಿಡಬಹುದಾದ ಮತ್ತು ಪೋಷಿಸಬಹುದಾದ ಸಂರಕ್ಷಾ ಗೃಹಗಳ ಮತ್ತು ಇತರ ಸಂಸ್ಥೆಗಳ ಪರಿಶೀಲನೆ;

(ಎಚ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ

– ಇವುಗಳ ಬಗ್ಗೆ ಉಪಬಂಧಿಸಬಹುದು.

(3) (2)ನೇ ಉಪಪ್ರಕರಣದ (ಡಿ) ಖಂಡದ ಅಥವಾ (ಜಿ) ಖಂಡದ ಮೇರೆಗೆ, ಯಾವುದೇ ನಿಯಮವನ್ನು ರಚಿಸುವಾಗ, ಅದರ ಉಲ್ಲಂಘನೆಯು ಎರಡುನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ರಾಜ್ಯ ಸರ್ಕಾರವು ಉಪಬಂಧಿಸಬಹುದು.

(4) ಈ ಅಧಿನಿಯಮದ ಮೇರೆಗೆ ರಚಿಸಲಾದ ಎಲ್ಲ ನಿಯಮಗಳನ್ನು, ಅವುಗಳನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಇರಿಸತಕ್ಕದ್ದು.

**24. ಈ ಅಧಿನಿಯಮವು ಇತರ ಕೆಲವು ಅಧಿನಿಯಮಗಳನ್ನು ಅಲ್ಪೀಕರಿಸದಿರುವುದು.**– ಸುಧಾರಣಾ ಶಾಲೆಗಳ ಅಧಿನಿಯಮ, 1897ರ (1897ರ 8) ಅಥವಾ ಸದರಿ ಅಧಿನಿಯಮವನ್ನು ಮಾರ್ಪಡಿಸುವುದಕ್ಕಾಗಿ ಅಥವಾ ಅನ್ಯಥಾ ಬಾಲಾಪರಾಧಿಗಳಿಗೆ ಸಂಬಂಧಿಸಿ ಅಧಿನಿಯಮಿಸಲಾದ ಯಾವುದೇ ರಾಜ್ಯ ಅಧಿನಿಯಮದ ಉಪಬಂಧಗಳನ್ನು ಈ ಅಧಿನಿಯಮದಲ್ಲಿರುವುದು ಯಾವುದೂ ಅಲ್ಪೀಕರಿಸುವುದೆಂದು ಅರ್ಥೈಸತಕ್ಕದ್ದಲ್ಲ.

**25. ನಿರಸನ ಮತ್ತು ಉಳಿಸುವಿಕೆಗಳು.**– (1) ಈ ಅಧಿನಿಯಮದ 1ನೇ ಪ್ರಕರಣವನ್ನುಳಿದು ಇತರ ಉಪಬಂಧಗಳು ಯಾವುದೇ ರಾಜ್ಯದಲ್ಲಿ ಜಾರಿಗೆ ಬರುವ ದಿನಾಂಕದಿಂದ ವ್ಯಕ್ತಿಗಳ ಅನೈತಿಕ ವ್ಯವಹಾರ ದಮನಕ್ಕೆ ಅಥವಾ ವೇಶ್ಯಾವೃತ್ತಿಯ ಪ್ರತಿಬಂಧಕ್ಕೆ ಸಂಬಂಧಿಸಿ ಆ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಆ ರಾಜ್ಯದಲ್ಲಿ ಜಾರಿಯಲ್ಲಿರುವ ಎಲ್ಲ ರಾಜ್ಯ ಅಧಿನಿಯಮಗಳು ನಿರಸಿತವಾಗತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ನಿರ್ದೇಶಿತವಾದ ಯಾವುದೇ ರಾಜ್ಯ ಅಧಿನಿಯಮವು ಈ ಅಧಿನಿಯಮದ ಮೂಲಕ ನಿರಸಿತವಾದಾಗ್ಯೂ, ಅಂಥ ರಾಜ್ಯ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು, (ಕೊಟ್ಟ ಯಾವುದೇ ನಿರ್ದೇಶನ, ಮಾಡಿದ ಯಾವುದೇ ರಿಜಿಸ್ಟರು, ನಿಯಮ ಅಥವಾ ಆದೇಶ, ವಿಧಿಸಿದ ಯಾವುದೇ ನಿರ್ಬಂಧವೂ ಸೇರಿ) ಅಂಥ ಕಾರ್ಯ ಅಥವಾ ಕ್ರಮವು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದಿರುವಷ್ಟು ಮಟ್ಟಿಗೆ, ಅಂಥ ಕಾರ್ಯವು ನಡೆದಾಗ ಅಥವಾ ಅಂಥ ಕ್ರಮವನ್ನು ಕೈಗೊಂಡಾಗ ಸದರಿ ಉಪಬಂಧಗಳು ಜಾರಿಯಲ್ಲಿ ಇದ್ದಿದ್ದರೆ ಹೇಗೋ ಹಾಗೆ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ನಡೆದಿರುವಂತೆ ಅಥವಾ ಕೈಗೊಂಡಿರುವಂತೆ ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ನಡೆದ ಯಾವುದೇ ಕಾರ್ಯದ ಅಥವಾ ಕೈಗೊಂಡ ಯಾವುದೇ ಕ್ರಮದ ಮೂಲಕ ರದ್ದಾಗುವವರೆಗೆ ತದನುಸಾರವಾಗಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

**ವಿವರಣೆ.**– ಈ ಪ್ರಕರಣದಲ್ಲಿ "ರಾಜ್ಯ ಅಧಿನಿಯಮ" ಎಂಬ ಪದಾವಳಿಯು "ಪ್ರಾಂತೀಯ ಅಧಿನಿಯಮವನ್ನು" ಒಳಗೊಳ್ಳುತ್ತದೆ.

**ಅನುಸೂಚಿ**

**2(ಸಿ) ಪ್ರಕರಣವನ್ನು ನೋಡಿ**

| ಪ್ರಕರಣ | ಅಧಿಕಾರಗಳನ್ನು ಚಲಾಯಿಸಲು ಸಕ್ಷಮನಾದ ಮ್ಯಾಜಿಸ್ಟ್ರೇಟ್ |
|---|---|
| 7(1) | ಜಿಲ್ಲಾ ಮ್ಯಾಜಿಸ್ಟ್ರೇಟ್. |
| 11(4) | ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಮೊದಲನೇ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್. |
| 15(5) | ಮಹಾನಗರ ಮ್ಯಾಜಿಸ್ಟ್ರೇಟ್, ಮೊದಲನೇ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್, ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್. |
| 16 | ಮಹಾನಗರ ಮ್ಯಾಜಿಸ್ಟ್ರೇಟ್, ಮೊದಲನೇ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್, ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್. |
| 18 | ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಉಪವಿಭಾಗೀಯ ಮ್ಯಾಜಿಸ್ಟ್ರೇಟ್. |
| 19 | ಮಹಾನಗರ ಮ್ಯಾಜಿಸ್ಟ್ರೇಟ್, ಮೊದಲನೇ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟ್, ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್. |
| 20 | ಜಿಲ್ಲಾ ಮ್ಯಾಜಿಸ್ಟ್ರೇಟ್, ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ ಅಥವಾ ರಾಜ್ಯ ಸರ್ಕಾರವು ವಿಶೇಷವಾಗಿ ಅಧಿಕೃತಗೊಳಿಸಲಾದ ಯಾರೇ ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್. |
| 22ಬಿ | ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಮೊದಲನೇ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟ್. |